ಸಂಪುಟ 01 | ಸಂಚಿಕೆ 145 | ಶುಕ್ರವಾರ 17 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ವಿಶ್ವ ಹಿಮೋಫಿಲಿಯಾ ದಿನ

ಹಿಮೋಫಿಲಿಯಾ ಕಾಯಿಲೆ ಮತ್ತು ಇತರ ಆನುವಂಶಿಕ ರಕ್ತಸ್ರಾವದ ಅಸ್ವಸ್ಥತೆಗಳ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಏಪ್ರಿಲ್ 17 ರಂದು ವಿಶ್ವ ಹಿಮೋಫಿಲಿಯಾ ದಿನವನ್ನು ಆಚರಿಸಲಾಗುತ್ತದೆ. 1989 ರಲ್ಲಿ, ಫ಼ಈಊ ಸಂಸ್ಥಾಪಕ ಫ್ರಾಂಕ್ ಸ್ಕ್ನಾಬೆಲ್ ಅವರ ಜನ್ಮದಿನದ ಗೌರವಾರ್ಥವಾಗಿ ವಿಶ್ವ ಹಿಮೋಫಿಲಿಯಾ ಒಕ್ಕೂಟ (WFH) ವಿಶ್ವ ಹಿಮೋಫಿಲಿಯಾ ದಿನವನ್ನು ಪ್ರಾರಂಭಿಸಿತು.

## ಸುಭಾಷಿತ

ಪರರನ್ನು ಗೌರವಿಸುವುದನ್ನು ಕಲಿಯದಿದ್ದರೆ ನಾವೆಂದೂ ದೊಡ್ಡವರಾಗುವುದಿಲ್ಲ.

–ಸರ್ದಾರ್ ವಲ್ಲಭಬಾಯಿ ಪಟೇಲ್

# ದೆಹಲಿಯಲ್ಲಿ ಸುರ್ಜೇವಾಲಾ ಅವರನ್ನು ಭೇಟಿ ಮಾಡಿದ ಸಚಿವಾಕಾಂಕ್ಷಿಗಳು



**ಬೆಂಗಳೂರು:** ಸಚಿವ ಸಂಪುಟ ಪುನರ್ ರಚನೆ ಸಲುವಾಗಿ ಹೈಕಮಾಂಡ್‌ನಲ್ಲಿ ಒತ್ತಡ ಹೇರಲು ದೆಹಲಿಯಲ್ಲಿ ಬೀಡುಬಿಟ್ಟಿರುವ ಕಾಂಗ್ರೆಸ್‌ನ ಹಿರಿಯ ಶಾಸಕರ ನಿಯೋಗ ಇಂದು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿನಾಯಕ ಹಾಗೂ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿದ್ದಾರೆ.

ಮಧ್ಯಾಹ್ನದ ವೇಳೆ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡುವ ಸಾಧ್ಯತೆ ಇದೆ. ದೆಹಲಿಯಲ್ಲಿ ಬೀಡುಬಿಟ್ಟಿರುವ ಶಾಸಕರಾದ ಟಿ.ಬಿ.ಜಯಚಂದ್ರ, ಪಿ.ಎಂ.ಅಶೋಕ್ ಪಟ್ಟಣ್, ಕೆ.ಷಡಕ್ಷರಿ, ಜಿ.ಟಿ.ಪಾಟೀಲ್, ಬಿ.ಜಿ.ಶಾಂತನಗೌಡ, ಪುಟ್ಟರಂಗಶೆಟ್ಟಿ, ಹಂಪನಗೌಡ ಬಾದರ್ಲಿ, ಬಿ.ಶಿವಣ್ಣ, ಮಹಂತೇಶ್ ಕೌಜಲಗಿ, ಯಶವಂತರಾಯ ಪಾಟೀಲ್, ಪಿ.ಎಸ್.ನಾಡಗೌಡ ಸೇರಿದಂತೆ ಹಲವರು ಇಂದು ಬೆಳಗ್ಗೆ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಸಚಿವ ಸಂಪುಟ ಪುನರ್ ರಚನೆಯಾಗಬೇಕು. ತಮಗೆ ಅವಕಾಶ ನೀಡಬೇಕು ಎಂಬುದು ಈ ಶಾಸಕರ ಬೇಡಿಕೆಯಾಗಿದೆ. ಅದೇ ಸಮಯದಲ್ಲಿ ರಾಜ್ಯದಲ್ಲಿನ ನಾಯಕತ್ವ ಬದಲಾವಣೆಯಲ್ಲಿನ ಗೊಂದಲಗಳನ್ನು ಬಗೆಹರಿಸುವಂತೆ ಹಿರಿಯ ಶಾಸಕರು ಮನವಿ ಮಾಡಿದ್ದಾರೆ. ಕಳೆದ ಭಾನುವಾರದಿಂದಲೂ ದೆಹಲಿಯಲ್ಲೇ ಬೀಡುಬಿಟ್ಟಿರುವ ಶಾಸಕರು ಸೋಮವಾರ ಎಐಸಿಸಿಯ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರನ್ನು ಭೇಟಿ ಮಾಡಿದ್ದರು. ಅನಂತರ ರಾಹುಲ್‌ಗಾಂಧಿ ಸೇರಿದಂತೆ ಬೇರೆ ಯಾವ ನಾಯಕರೂ 5 ದಿನಗಳಾದರೂ ಲಭ್ಯವಾಗಿರಲಿಲ್ಲ.

ಶಾಸಕರ ಒತ್ತಡಕ್ಕೆ ಮಣಿದು ಇಂದು ಬೆಳಗ್ಗೆ ರಣದೀಪ್ ಸಿಂಗ್ ಸುರ್ಜೇವಾಲ ಭೇಟಿಗೆ ಸಮಯ ನೀಡಿತ್ತು. ಕೆ.ಸಿ. ವೇಣುಗೋಪಾಲ್ ಕೇರಳದಿಂದ ದೆಹಲಿಗೆ ಮರಳಿದ್ದರೂ ಕೂಡ ಹಿರಿಯ ಶಾಸಕರ ನಿಯೋಗಕ್ಕೆ ಸಮಯ ನೀಡಲು ಹಿಂದೇಟು ಹಾಕಿದ್ದರು. ಸಚಿವ ಸಂಪುಟ ಪುನರ್ ರಚನೆ ಮುಖ್ಯಮಂತ್ರಿಯವರ ಪರಮಾಧಿಕಾರ. ಅದಕ್ಕಾಗಿ ಶಾಸಕರು ದೆಹಲಿಗೆ ಭೇಟಿ ನೀಡುವ ಅಗತ್ಯ ಇಲ್ಲ. ಹೀಗಾಗಿ ಎಲ್ಲರೂ ವಾಪಸ್ ಹೋಗಿ ಎಂದು ವರಿಷ್ಠರು ಸಂದೇಶ ರವಾನಿಸಿದ್ದಾರೆ. ಸಂಸತ್‌ನಲ್ಲಿ ಮಹಿಳಾ ಮೀಸಲಾತಿಯ ಮಸೂದೆ ಮಂಡನೆಯಾಗುತ್ತಿದೆ. ಅತೀ ಮುಖ್ಯವಾದ ಈ ಮಸೂದೆ ಮೇಲಿನ ಚರ್ಚೆಗೆ ಕಾಂಗ್ರೆಸ್‌ನಲ್ಲಿ ಹಿರಿಯ ನಾಯಕರು ತಯಾರಿ ನಡೆಸುತ್ತಿದ್ದಾರೆ. ಹೀಗಾಗಿ ಕರ್ನಾಟಕದ ನಿಯೋಗಕ್ಕೆ ಭೇಟಿ ಮಾಡಲು ಸಮಯ ನೀಡುತ್ತಿಲ್ಲ ಎಂದು ಹೇಳಲಾಗಿದೆ.

ರಾಹುಲ್‌ಗಾಂಧಿ ಅವರಂತೂ ಕಾಂಗ್ರೆಸ್ ಶಾಸಕರನ್ನು ಹತ್ತಿರಕ್ಕೂ ಬಿಟ್ಟುಕೊಂಡಿಲ್ಲ. ಅವರ ಆಪ್ತರಾದ ಕೆ.ಸಿ.ವೇಣುಗೋಪಾಲ್ ಕೂಡ ಸಮಯ ನೀಡದೆ ಸತಾಯಿಸುತ್ತಿದ್ದಾರೆ. ಕೊನೆಗೆ ಇಂದು ವೇಣುಗೋಪಾಲ್ ಭೇಟಿಯಾಗಲಿದ್ದಾರೆ ಎಂದು ಹೇಳಲಾಗುತ್ತಿದೆ. ಇಂದು ಸಂಜೆ ಬಹುತೇಕ ಶಾಸಕರು ದೆಹಲಿಯಿಂದ ಬೆಂಗಳೂರಿಗೆ ವಾಪಸ್ ಆಗಲಿದ್ದಾರೆ. ಒಂದು ವೇಳೆ ಅಗತ್ಯ ಬಿದ್ದರೆ ರಾಹುಲ್‌ಗಾಂಧಿ ಅವರನ್ನು ಭೇಟಿ ಮಾಡಲು ಮತ್ತೊಮ್ಮೆ ದೆಹಲಿಗೆ ಭೇಟಿ ನೀಡಲು ಸಿದ್ಧ ಎಂದು ಶಾಸಕ ಟಿ.ಬಿ. ಜಯಚಂದ್ರ ದೆಹಲಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವರಿಷ್ಠ ನಾಯಕರು ಸಂಸತ್ತಿನ ಅಧಿವೇಶನದ ಹಿನ್ನೆಲೆಯಲ್ಲಿ ಕಾರ್ಯದೊತ್ತಡದಲ್ಲಿದ್ದಂತ್ತಿದೆ. ಹೀಗಾಗಿ ನಮಗೆ ಸಮಯ ನೀಡುವುದು ಕಷ್ಟವಾಗುತ್ತಿದೆ. ಈಗ ಸಾಧ್ಯವಾಗದೇ ಇದ್ದರೆ ಮತ್ತೊಂದು ದಿನ ದೆಹಲಿಗೆ ಬರಲು ತಾವು ಸಿದ್ಧ ಎಂದು ಹೇಳಿದ್ದಾರೆ. ಸುಮಾರು 20ಕ್ಕೂ ಹೆಚ್ಚು ಶಾಸಕರು ಸಂಪುಟ ಪುನರ್ ರಚನೆಗಾಗಿ ಪಟ್ಟು ಹಿಡಿದು ಒಂದು ವಾರದಿಂದಲೂ ದೆಹಲಿಯಲ್ಲಿ ಠಿಕಾಣಿ ಹೂಡಿದ್ದಾರೆ.

## ಬ್ರಾಹ್ಮಣರ ಓಣಿ ಶ್ರೀರಾಮ ಮಂದಿರದಲ್ಲಿ ವಸಂತ ಧಾರ್ಮಿಕ ಶಿಬಿರಕ್ಕೆ ಚಾಲನೆ: ಪಂಡಿತ ರಾಮಕೃಷ್ಣ ಆಚಾರ್ಯ

ನೈಜ್ಯ ದೆಸೆ ನ್ಯೂಸ್

**ಉಡುಪಿ ಅಧೋಕ್ಷಜಮಠ ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠ ಹಾಗೂ ತಾಲೂಕು ಬ್ರಾಹ್ಮಣ ಸಮಾಜದ ವತಿಯಿಂದ ಗುರುವಾರ ವಸಂತ ಧಾರ್ಮಿಕ ಶಿಬಿರ ಆರಂಭಗೊಂಡಿದೆ ಎಂದು ಪಂಡಿತ ರಾಮಕೃಷ್ಣ ಆಚಾರ್ಯ ಗೋನವಾರ ಹೇಳಿದರು.**



ನಗರದ ಬ್ರಾಹ್ಮಣರ ಓಣಿಯಲ್ಲಿರುವ ಶ್ರೀರಾಮ ಮಂದಿರದಲ್ಲಿ ವಸಂತ ಧಾರ್ಮಿಕ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈಗಾಗಲೇ ಮಹಿಳೆಯರು ಹಾಗೂ ಮಕ್ಕಳಿಗೆ ಬೇರೆ ಬೇರೆ ಶಿಕ್ಷಣ ನೀಡಲಾಗುತ್ತಿದೆ. ಸುಮಾರು 35 ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದಾರೆ ಎಂದರು. ನಂತರ ಸಾಲಗುಂದದ ರಂಗನಾಥ ಆಚಾರ್ಯರು ಮಾತನಾಡಿ, ಶಿಬಿರಾರ್ಥಿಗಳಿಗೆ ನಿತ್ಯಸ್ತೋತ್ರ, ನಿತ್ಯಾನುಷ್ಠಾನ, ರಾಮಾಯಣ–ಮಹಾಭಾರತದ ಪುರಾಣ ಕಥೆಗಳು, ಬೌದ್ಧಿಕ ಕ್ರೀಡೆಗಳು, ಸಂಕೀರ್ತನೆ, ಹಾಗೂ ಹಬ್ಬಗಳ ಆಚರಣೆಯ ಮಹತ್ವವನ್ನು ತಿಳಿಸಲಾಗುವುದು ಎಂದು ವಿವರಿಸಿ ಈ ವಿಶೇಷ ಶಿಬಿರವನ್ನು ಗೋವಿಂದಾಚಾರ್ಯ ಮಠಾಧಿಕಾರಿ, ವಿಷ್ಣು ಕುಲಕರ್ಣಿ, ಶ್ರೀರಾಮ ಕುಲಕರ್ಣಿ, ಶ್ರೀ ಹರಿ, ಸಾಗರ ಅವರು ನಿರ್ವಹಣೆ ಮಾಡುತ್ತಿದ್ದಾರೆ ಎಂದರು.

# ಪೆಟ್ರೋಲ್ ಹೊತ್ತ ಜಗ ವಿಕ್ರಮ್ ಹಡಗು ಗುಜರಾತ್‌ಗೆ ಆಗಮನ




ನೈಜ್ಯ ದೆಸೆ ನ್ಯೂಸ್

**ಅಹಮದಾಬಾದ್: ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನತೆಯ ನಡುವೆಯೇ, 20,400 ಮೆಟ್ರಿಕ್ ಟನ್ ದ್ರವೀಕೃತ ಪೆಟ್ರೋಲಿಯಂ ಅನಿಲ ಹೊತ್ತ ಭಾರತೀಯ ಧ್ವಜ ಹೊತ್ತ ಹಡಗು 'ಜಗ್ ವಿಕ್ರಮ್' ಗುಜರಾತ್‌ನ ಕಾಂಡ್ಲಾದ ದೀನ್‌ದಯಾಳ್ ಬಂದರು ಪ್ರಾಧಿಕಾರಕ್ಕೆ ಆಗಮಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.**


ಅಮೆರಿಕ ಮತ್ತು ಇರಾನ್ ನಡುವಿನ ಎರಡು ವಾರಗಳ ತಾತ್ಕಾಲಿಕ ಕದನ ವಿರಾಮದ ನಂತರ ಹಡಗು ಹಾರ್ಮುಜ್ ಜಲಸಂಧಿಯನ್ನು ದಾಟಿ ಮಂಗಳವಾರ ರಾತ್ರಿ ಕಚ್‌ನ ಡಿಪಿಎ ಕಾಂಡ್ಲಾದ ಆಯಿಲ್ ಜೆಟ್ಟಿ–1 ನಲ್ಲಿ ಲಂಗರು ಹಾಕಲಾಗಿದೆ ಎಂದು ಪ್ರಾಧಿಕಾರ ಹೇಳಿಕೆಯಲ್ಲಿ ತಿಳಿಸಿದೆ.

ಮಾರ್ಚ್ ಆರಂಭದಿಂದಲೂ ಪರ್ಷಿಯನ್ ಕೊಲ್ಲಿಯಿಂದ ನಿರ್ಗಮಿಸಿದ ಒಂಬತ್ತನೇ ಭಾರತೀಯ ಹಡಗು ಇದಾಗಿದ್ದು, ಸುಮಾರು 15 ಇತರ ಭಾರತೀಯ ಧ್ವಜ ಹೊತ್ತ ಹಡಗುಗಳು ಈ ಪ್ರದೇಶದಲ್ಲಿ ಮಾರ್ಗಕ್ಕಾಗಿ ಕಾಯುತ್ತಿವೆ ಎಂದು ಸರ್ಕಾರಿ ಅಧಿಕಾರಿಗಳು ಈ ಹಿಂದೆ ತಿಳಿಸಿದ್ದರು. ಏಪ್ರಿಲ್ 11 ರಂದು ಟ್ಯಾಂಕರ್ ಹಾರ್ಮುಜ್ ಜಲಸಂಧಿಯನ್ನು ದಾಟಿತು, ಇದು ಎರಡು ವಾರಗಳ ಕದನ ವಿರಾಮ ಘೋಷಿಸಿದ ನಂತರ ಭಾರತೀಯ ಹಡಗು ನಡೆಸಿದ ಮೊದಲ ಸಾಗಣೆಯಾಗಿದೆ.

## ಪಿಕಾರ್ಡ ಬ್ಯಾಂಕಿನ ಚುನಾವಣೆ ಪ್ರಕ್ರಿಯೆಗೆ ಕಲಬುರಗಿ ಪೀಠದಿಂದ ತಡೆಯಾಜ್ಞೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ. ಮಾನ್ವಿ ಸಹಕಾರ ಸಂಘದ ಕಚೇರಿಯಲ್ಲಿ ಏ.7 ರ ಚುನಾವಣೆ ಪ್ರಕ್ರಿಯೆಯನ್ನು ಸ್ಥಗಿತ ಗೊಳಿಸುವಂತೆ ಉಚ್ಚನ್ಯಾಯಾಲಯ ಕಲಬುರಗಿ ಪೀಠವು ನೀಡಿದ ತಡೆಯಾಜ್ಞೆಯನ್ನು ಚುನಾವಣಾಧಿಕಾರಿಗಳಿಗೆ ಪಿಕಾರ್ಡ ಬ್ಯಾಂಕಿನ ಅಧಿಕಾರಿಗಳ ಮೂಲಕ ತಲುಪಿಸಿ ಅರ್ಜಿದಾರರ ಪರ ವಕೀಲರಾದ ವಿಶ್ವನಾಥ ರಾಯಪ್ಪ ಮಾತನಾಡಿ.**



ಪಿಕಾರ್ಡ ಬ್ಯಾಂಕಿನ 2025–26 ನೇ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರ ಮುಂದುವರೆದ ಚುನಾವಣಾವೇಳಾ ಪಟ್ಟಿ ಏ.7 ರ ಚುನಾವಣೆ ಪ್ರಕ್ರಿಯೆಯಲ್ಲಿ ಮತದಾರರ ಪಟ್ಟಿ ಸೇರಿದಂತೆ ವಿವಿಧ ಲೋಪದೋಷಗಳ ವಿರುದ್ದ ಉಚ್ಚನ್ಯಾಯಾಲಯ ಕಲಬುರಗಿ ಪೀಠಕ್ಕೆ ಅರ್ಜಿದಾರರಾದ ಜೆ.ಸುದಾಕರ್ ಹಾಗೂ ಇತರರು ಮನವಿ ಸಲ್ಲಿಸಿರುವುದನ್ನು ಪರಿಗಣಿಸಿ ಉಚ್ಚನ್ಯಾಯಾಲಯ ಕಲಬುರಗಿ ಪೀಠವು ಏ.7 ರ ಚುನಾವಣೆ ಪ್ರಕ್ರಿಯೆಯನ್ನು ಸ್ಥಗಿತ ಗೊಳಿಸುವಂತೆ ತಡೆಯಾಜ್ಞಯನ್ನು ನೀಡಿದು ನ್ಯಾಯಾಲಯದ ಅದೇಶ ಪ್ರತಿಯನ್ನು ಇಂದು ಬ್ಯಾಂಕಿನ ಅಧಿಕಾರಿಗಳಿಗೆ ಸಲ್ಲಿಸಲಾಯಿತು ಎಂದು ತಿಳಿಸಿದರು.

## ಜನಗಣತಿ ಕಾರ್ಯವನ್ನು ಯಶಸ್ವಿಗೊಳಿಸಲು ಜಿಲ್ಲಾಧಿಕಾರಿ ಜಿ.ಪ್ರಭು ಮನವಿ.

ನೈಜ್ಯ ದೆಸೆ ನ್ಯೂಸ್

**ಚಿಕ್ಕಬಳ್ಳಾಪುರ: ಜನಗಣತಿ–2027ರ ಸಂಬಂಧ ಚಿಕ್ಕಬಳ್ಳಾಪುರ ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟು 3082 ಬ್ಲಾಕ್‌ಗಳನ್ನು (House Listing Blocks) ರಚನೆ ಮಾಡಲಾಗಿದೆ. 2,537 ಗಣತಿದಾರರನ್ನು ಮತ್ತು 442 ಮೇಲ್ವಿಚಾರಕರನ್ನು ನೇಮಕ ಮಾಡಲಾಗಿರುತ್ತದೆ.**



ಜನಗಣತಿಯು ಸಂವಿಧಾನಾತ್ಮಕ ಮತ್ತು ಶಾಸನಬದ್ಧ ಚಟುವಟಿಕೆಯಾಗಿದ್ದು, ಇದು ಅನುಚ್ಛೇದ 246(ಯೂನಿಯನ್ ಪಟ್ಟಿ) ಮತ್ತು ಜನಗಣತಿ ಕಾಯ್ದೆ 1948 ರ ಅಡಿಯಲ್ಲಿ 16ನೇ ಏಪ್ರಿಲ್ 2026 ರಿಂದ ಮೇ 15 ರ ವರೆಗೆ ಮನೆ ಮನೆ ಭೇಟಿ ನೀಡುವ ಜನಗಣತಿ ಕಾಯ್ದೆ 1948 ಸೆಕ್ಷನ್ 8 ರಂತೆ ಮತ್ತು ಕರ್ನಾಟಕ ಸರ್ಕಾರದ ಅಧಿಸೂಚನೆ ಆರ್ ಡಿ.119.ಟಿಎನ್‌ಆರ್.2026, ದಿನಾಂಕ 06/03/2026 ರ ಅಧಿಸೂಚನೆಯಲ್ಲಿ ಸೂಚಿಸಿರುವಂತೆ ವಸತಿ ಗುಣಮಟ್ಟ, ಸೌಕರ್ಯಗಳು (ನೀರು, ವಿದ್ಯುತ್ ಮತ್ತು ಶೌಚಾಲಯಗಳು,ಸ್ವತ್ತುಗಳಮುಂತಾದ ವುಗಳ ಕುರಿತು 33 ಪ್ರಶ್ನೆಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ.

ಜನಗಣತಿಯ ಮಾಹಿತಿಗಳು ಯೋಜನೆ, ಸಮಾಜ ಕಲ್ಯಾಣ ಯೋಜನೆಗಳು, ಸಂಪನ್ಮೂಲ ಹಂಚಿಕೆ ಮತ್ತು ಕ್ಷೇತ್ರಗಳ ಗಡಿ ನಿರ್ಣಯಕ್ಕೆ ಅಡಿಪಾಯವನ್ನು ರೂಪಿಸುತ್ತವೆ , ಆದ್ದರಿಂದ ಸಾರ್ವಜನಿಕರು ಅಗತ್ಯ ಮಾಹಿತಿಯನ್ನು ಹಂಚಿಕೊಂಡು ಮತ್ತು ಸ್ವಯಂ ಗಣತಿ ಪೂರ್ಣಗೊಂಡಿರುವ ಸಾರ್ವಜನಿಕರು Self ಜನಗಣತಿ ಕಾರ್ಯದ Enumeration ಐಆಯನ್ನು ಕಡ್ಡಾಯವಾಗಿ ಗಣತಿದಾರರಿಗೆ ನೀಡಿ ಯಶಸ್ವಿಗೊಳಿಸಲು ಸಹಕರಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

# ತುಂಗಭದ್ರಾ ಅಣೆಕಟ್ಟೆ ಕ್ರೆಸ್ಟ್‌ಗೇಟ್ ಕಾಮಗಾರಿ ವೇಗಕ್ಕೆ ಸಮರ್ಪಕ ನಿರ್ವಹಣೆಯಿಂದ 70 ವರ್ಷ ಬಾಳಿಕೆ: ತಜ್ಞ ಕನ್ನಯ್ಯ ನಾಯ್ಡು

ನೈಜ್ಯ ದೆಸೆ ನ್ಯೂಸ್

**ಹೊಸಪೇಟೆ: ತುಂಗಭದ್ರಾ ಅಣೆಕಟ್ಟೆಯ ಕ್ರೆಸ್ಟ್‌ಗೇಟ್ ಬದಲಾವಣೆ ಕಾಮಗಾರಿ ಅಂತಿಮ ಹಂತ ತಲುಪಿದ್ದು, ಸಮರ್ಪಕ ನಿರ್ವಹಣೆ ಮಾಡಿದರೆ ಹೊಸ ಗೇಟ್‌ಗಳು 50ರಿಂದ 70 ವರ್ಷಗಳವರೆಗೆ ಬಾಳಿಕೆ ಬರಲಿವೆ ಎಂದು ಕ್ರೆಸ್ಟ್‌ಗೇಟ್ ತಜ್ಞ ಕನ್ನಯ್ಯ ನಾಯ್ಡು ಹೇಳಿದ್ದಾರೆ.**



ಅಣೆಕಟ್ಟೆಯಲ್ಲಿನ ಗೇಟ್ ಅಳವಡಿಕೆ ಕಾಮಗಾರಿಯನ್ನು ಮಂಗಳವಾರ ವೀಕ್ಷಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, "ಯಾವುದೇ ನಿರ್ವಹಣೆ ಇಲ್ಲದಿದ್ದರೆ ಗೇಟ್‌ಗಳು ಸುಮಾರು 20 ವರ್ಷಗಳಷ್ಟೇ ಕಾರ್ಯಕ್ಷಮವಾಗಿರುತ್ತವೆ. ಆದರೆ, ವರ್ಷಾವರ್ಷ ಸಮರ್ಪಕ ನಿರ್ವಹಣೆ ಮಾಡಿದರೆ 70 ವರ್ಷಗಳವರೆಗೆ ಯಾವುದೇ ತೊಂದರೆ ಇಲ್ಲದೆ ಬಳಸಬಹುದು" ಎಂದು ವಿವರಿಸಿದರು. ರಾಷ್ಟ್ರೀಯ ಅಣೆಕಟ್ಟೆ ಸುರಕ್ಷತಾ ಪ್ರಾಧಿಕಾರದ ಸದಸ್ಯರಾಗಿರುವ ಅವರು, ಗೇಟ್‌ಗಳ ಸುರಕ್ಷತೆ ಕುರಿತು ಪ್ರಮಾಣಪತ್ರ ನೀಡಿದ ಬಳಿಕ ಯಾವುದೇ ಅನುಮಾನಕ್ಕೆ ಅವಕಾಶ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು. "ಇಲ್ಲಿನ ಕಾಮಗಾರಿಗಳು ತಾಂತ್ರಿಕವಾಗಿ ಪರಿಪೂರ್ಣವಾಗಿ ನಡೆದಿವೆ" ಎಂದು ಅವರು ಹೇಳಿದರು.

ತುಂಗಭದ್ರಾ ಅಣೆಕಟ್ಟೆಯಲ್ಲಿ ಒಟ್ಟು 33 ಕ್ರೆಸ್ಟ್‌ಗೇಟ್‌ಗಳ ಪೈಕಿ 26 ಗೇಟ್‌ಗಳ ಅಳವಡಿಕೆ ಪೂರ್ಣಗೊಂಡಿದ್ದು, ಇದರಲ್ಲಿ 15 ಗೇಟ್‌ಗಳಿಗೆ ಯಶಸ್ವಿಯಾಗಿ ಪರೀಕ್ಷೆ ನಡೆಸಲಾಗಿದೆ. ಕೆಲವು ಗೇಟ್‌ಗಳಿಗೆ ಸ್ಲಿಮ್ ಪ್ಲೇಟ್ ಅಳವಡಿಕೆ ಪ್ರಕ್ರಿಯೆ ನಡೆಯುತ್ತಿದೆ. ಕೊನೆಯ ಗೇಟ್ ಅಳವಡಿಕೆ ಕಾರ್ಯ ಮಂಗಳವಾರ ಆರಂಭವಾಗಿದ್ದು, ಶನಿವಾರದೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಈ ತಿಂಗಳ ಅಂತ್ಯದೊಳಗೆ ವೆಲ್ಡಿಂಗ್ ಕಾರ್ಯಗಳು ಮುಗಿಯಲಿದ್ದು, ಮೇ 11ರ ವೇಳೆಗೆ ಚೆನ್ನೈಯಿಂದ ಚೈನ್‌ಲಿಂಕ್ ಭಾಗಗಳು ತಲುಪಲಿವೆ. ಮೇ 15ರೊಳಗೆ ಚೈನ್ ಅಳವಡಿಕೆ ಹೊರತುಪಡಿಸಿ ಉಳಿದ ಎಲ್ಲಾ ಕೆಲಸಗಳು ಪೂರ್ಣಗೊಳ್ಳಲಿವೆ ಎಂದು ಕನ್ನಯ್ಯ ನಾಯ್ಡು ತಿಳಿಸಿದರು.

ಚೈನ್‌ಲಿಂಕ್ ಅಳವಡಿಕೆ ಪ್ರಕ್ರಿಯೆ ಹೆಚ್ಚಿನ ಕಷ್ಟದದ್ದಲ್ಲ. ಒಂದು ದಿನಕ್ಕೆ ಒಂದು ಗೇಟ್‌ಗೆ ಚೈನ್ ಅಳವಡಿಸಲು ಸಾಧ್ಯವಿದೆ. ಜಲಾಶಯದಲ್ಲಿ ನೀರು ಸಂಗ್ರಹವಾಗಿದ್ದರೂ ಈ ಕಾರ್ಯವನ್ನು ನಿರ್ವಹಿಸಬಹುದು. ಹೀಗಾಗಿ, ಮೇ ಮಧ್ಯಭಾಗದಲ್ಲಿ ಭಾರಿ ಮಳೆಯಾದರೂ ನೀರು ಸಂಗ್ರಹಕ್ಕೆ ಯಾವುದೇ ಅಡ್ಡಿ ಇರುವುದಿಲ್ಲ ಎಂದು ಅವರು ಭರವಸೆ ನೀಡಿದರು.

51 ಕೋಟಿ ವೆಚ್ಚದ ಮಹತ್ವದ ಯೋಜನೆ:– ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಒ.ಆರ್. ಕೆ. ರೆಡ್ಡಿ ಮಾಹಿತಿ ನೀಡಿದ್ದು, ಒಟ್ಟು ?51 ಕೋಟಿ ವೆಚ್ಚದಲ್ಲಿ ಈ ಕಾಮಗಾರಿ ಕೈಗೊಳ್ಳಲಾಗಿದೆ. ಗೇಟ್‌ಗಳ ನಿರ್ಮಾಣಕ್ಕೆ ?44 ಕೋಟಿ, ಚೈನ್‌ಲಿಂಕ್ ಅಳವಡಿಕೆಗೆ ?5.1 ಕೋಟಿ ಹಾಗೂ ಸಲಹಾ ವೆಚ್ಚವಾಗಿ ?1.34 ಕೋಟಿ ಮೀಸಲಿರಿಸಲಾಗಿದೆ. ಇದುವರೆಗೆ ?29.5 ಕೋಟಿ ಗುತ್ತಿಗೆದಾರರಿಗೆ ಪಾವತಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ ಅಧೀಕ್ಷಕ ಎಂಜಿನಿಯರ್ ನಾರಾಯಣ ನಾಯ್ಕ, ಎಂಜಿನಿಯರ್‌ಗಳಾದ ಜ್ಞಾನೇಶ್ವರ್ ಮತ್ತು ಕಿರಣ್ ಉಪಸ್ಥಿತರಿದ್ದರು.

ನೀರು ಸಂಗ್ರಹ ಸಾಮರ್ಥ್ಯ: 100 ಟಿಎಂಸಿ ಗುರಿ:– 133 ಟಿಎಂಸಿ ಅಡಿ ಸಾಮರ್ಥ್ಯದ ತುಂಗಭದ್ರಾ ಜಲಾಶಯದಲ್ಲಿ ಸುಮಾರು 31 ಟಿಎಂಸಿ ಅಡಿ ಹೂಳು ಸಂಗ್ರಹವಾಗಿದೆ ಎಂದು ಅಂದಾಜಿಸಲಾಗಿದೆ. ಇದರ ಪರಿಣಾಮವಾಗಿ ಜಲಾಶಯದ ವಾಸ್ತವಿಕ ನೀರು ಸಂಗ್ರಹ ಸಾಮರ್ಥ್ಯ ಸುಮಾರು 102 ಟಿಎಂಸಿ ಅಡಿಯಷ್ಟಿದೆ. ಆದರೂ ಸುರಕ್ಷತಾ ದೃಷ್ಟಿಯಿಂದ 100 ಟಿಎಂಸಿ ಅಡಿ ನೀರು ಸಂಗ್ರಹಿಸುವ ಗುರಿ ಹೊಂದಲಾಗಿದೆ. ಮುಂಗಾರು ಮಳೆ ಸಮರ್ಪಕವಾಗಿ ಬಂದರೆ ರೈತರ ಎರಡೂ ಹಂಗಾಮುಗಳಿಗೆ ನೀರು ಲಭ್ಯವಾಗಲಿದೆ ಎಂಬ ವಿಶ್ವಾಸವನ್ನು ಕನ್ನಯ್ಯ ನಾಯ್ಡು ವ್ಯಕ್ತಪಡಿಸಿದರು.

ಪ್ರತಿ ವರ್ಷ 11 ಗೇಟ್‌ಗಳಂತೆ ಮೂರು ವರ್ಷಕ್ಕೊಮ್ಮೆ ಸಂಪೂರ್ಣ 33 ಗೇಟ್‌ಗಳ ನಿರ್ವಹಣೆ ಕೈಗೊಳ್ಳುವ ಯೋಜನೆ ರೂಪಿಸಲಾಗಿದೆ. ಈ ಕ್ರಮವನ್ನು ಕಟ್ಟುನಿಟ್ಟಾಗಿ ಅನುಸರಿಸಿದರೆ ಕ್ರೆಸ್ಟ್‌ಗೇಟ್‌ಗಳ ದೀರ್ಘಾವಧಿ ಬಾಳಿಕೆ ಖಚಿತವಾಗಲಿದೆ ಎಂದು ತಜ್ಞರು ಹೇಳಿದರು. ತಮ್ಮ ಆಕ್ಷೇಪಣೆಗಳ ಬಳಿಕ ಸರ್ಕಾರ ಹಣ ಬಿಡುಗಡೆ ಮಾಡಿದ ವಿಚಾರವನ್ನು ಸ್ಮರಿಸಿದ ಕನ್ನಯ್ಯ ನಾಯ್ಡು, ಕಾಮಗಾರಿಗೆ ಅಡ್ಡಿ ತರದ ಮಾಧ್ಯಮಗಳಿಗೆ ಕೃತಜ್ಞತೆ ಸಲ್ಲಿಸಿದರು.

## ಸಾಹಿತ್ಯ ಸಿಂಚನ

ಪ್ರಕೃತಿ
ಹಸಿರು ಹೊದಿಕೆಯ ತಾಯಿ ಪ್ರಕೃತಿ,
ಹೃದಯಕ್ಕೆ ನೀಡುವಳು ಶಾಂತಿ ಸ್ಮೃತಿ.
ಗಾಳಿ ಮಾತಿನಲ್ಲಿ ಮಧುರ ಸಂಗೀತ,
ಪಕ್ಷಿಗಳ ಕೂಗಿನಲ್ಲಿ ಜೀವನ ಗೀತ.

ಬೆಟ್ಟಗಳ ಮಡಿಲಲ್ಲಿ ಮಂಜಿನ ನಗು,
ನದಿಯ ಹರಿವಿನಲ್ಲಿ ಸಂತಸದ ತಗು.
ಮಳೆಯ ಹನಿಯಲ್ಲಿ ಮಣ್ಣಿನ ವಾಸನೆ,
ಮನದೊಳಗೆ ಮೂಡಿಸುವ ಹೊಸ ಕನಸುನೆ.

ಮರಗಳ ನೆರಳು ತಾಯಿಯ ಅಡಗು,
ಹೂಗಳ ಸುಗಂಧ ಜೀವಕ್ಕೆ ಬೆಳಗು.
ಪ್ರಕೃತಿ ನೀಡಿದ ಅಮೂಲ್ಯ ದಾನ,
ಅದನ್ನು ಕಾಯುವುದು ನಮ್ಮ ಧರ್ಮಧಾನ.

ಆಕಾಶ, ಭೂಮಿ, ಸಾಗರ ಸಂಗಮ,
ಜೀವನವೆಲ್ಲ ಪ್ರಕೃತಿಯ ಅನುಗ್ರಹಂ.
ಪ್ರಕೃತಿಯನ್ನು ಪ್ರೀತಿಸಿ ಉಳಿಸೋಣ ನಾವು,
ಭವಿಷ್ಯದ ಲೋಕಕ್ಕೆ ಆಶೆಯ ಬೆಳಕು ನೀಡೋಣ ನಾವು.

ಅಮರೇಶ್

## ಲೊಯೋಲ ಕಾಲೇಜಿನಲ್ಲಿ ರಾಷ್ಟ್ರೀಯ ಅಗ್ನಿಶಾಮಕ ಸೇವಾ ಸಪ್ತಾಹ ದಿನಾಚರಣೆ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಲೊಯೋಲ ಶಿಕ್ಷಣ ಸಂಸ್ಥೆಯ ಕಾಲೇಜಿನ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಹಾಗೂ ಲೊಯೋಲ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ನಡೆದ ರಾಷ್ಟ್ರೀಯ ಅಗ್ನಿಶಾಮಕ ಸೇವಾ ಸಪ್ತಾಹ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ರಾಯಚೂರು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ರವೀಂದ್ರ ಎ. ಘಾಟಗೆ ಮಾತನಾಡಿ ಸಾರ್ವಜನಿಕರಲ್ಲಿ ಅಗ್ನಿ ಅವಘಡಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ತುರ್ತು ಸಂದರ್ಭಗಳಲ್ಲಿ ಹೇಗೆ ಪ್ರತಿಕ್ರಿಯಿಸಬೇಕು ಎನ್ನುವುದರ ಕುರಿತು ಜಾಗೃತಿ ಮೂಡಿಸುವುದಕ್ಕಾಗಿ ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ರಾಷ್ಟ್ರೀಯ ಅಗ್ನಿಶಾಮಕ ಸೇವಾ ಸಪ್ತಾಹ ದಿನಾಚರಣೆ ಕಾರ್ಯಕ್ರಮವನ್ನು ಇಲಾಖೆಯಿಂದ ಹಮ್ಮಿಕೊಳ್ಳಲಾಗುತ್ತದೆ.**



ವಿದ್ಯುತ್ ಉಪಕರಣಗಳ ಬಳಕೆ ಮತ್ತು ಬೆಂಕಿಯ ವಿಷಯದಲ್ಲಿ ಹೆಚ್ಚಿನ ಜಾಗೃತಿ ವಹಿಸದೆ ಇರುವುದರಿಂದ ಹೆಚ್ಚಿನ ಅಗ್ನಿ ಅನಾಹುತಗಳು ಸಂಭವಿಸುತ್ತವೆ.ಅದ್ದರಿಂದ ಮನೆಯಿಂದ ಹೊರಹೋಗುವಾಗ ಅನಗತ್ಯ ಸ್ವಿಚ್‌ಗಳನ್ನು ಆಫ್ ಮಾಡಿ. ಎಲ್.ಪಿ.ಜಿ ಗ್ಯಾಸ್ ಸೋ–ರಿಕೆಯಾಗುತ್ತಿದ್ದರೆ ತಕ್ಷಣ ರೆಗ್ಯುಲೇಟರ್ ಆಫ್ ಮಾಡಿ ಕಿಟಕಿ,ಬಾಗಿಲುಗಳನ್ನು ತೆರೆಯಿರಿ. ಬಿಸಿಲು ಹೆಚ್ಚಿರುವ ಜಿಲ್ಲೆಗಳಲ್ಲಿ ಒಣ ಕಸ ಅಥವಾ ಹುಲ್ಲಿನ ಬಣವೆಗಳ ಬಳಿ ಬೆಂಕಿ ಹಚ್ಚುವಾಗ ಹೆಚ್ಚಿನ ನಿಗಾವಹಿಸಬೇಕು.

ಅಗ್ನಿ ಅವಘಡ ಸಂಭವಿಸಿದ ಮೊದಲ ಕೆಲವೇ ನಿಮಿಷಗಳು ಅತ್ಯಂತ ನಿರ್ಣಾಯಕವಾಗಿರುವುದರಿಂದ ಈ ಸಮಯವನ್ನು ಬಂಗಾರದ ಸಮಯ ಎಂದು ಕರೆಯಲಾಗುತ್ತದೆ ಈ ಸಮಯದಲ್ಲಿ ಬೆಂಕಿ ಹರಡದಂತೆ ಸೂಕ್ತ ಕ್ರಮವನ್ನು ಕೈಗೊಂಡಲ್ಲಿ ಅಮೂಲ್ಯವಾದ ಜೀವ ಮತ್ತು ಆಸ್ತಿ ಹಾನಿಯನ್ನು ತಡೆಗಟ್ಟಬಹುದು ಸುರಕ್ಷತೆ ಎನ್ನುವುದು ಕೇವಲ ಅಗ್ನಿಶಾಮಕ ದಳದ ಜವಾಬ್ದಾರಿಯಲ್ಲ, ಅದು ಪ್ರತಿಯೊಬ್ಬ ನಾಗ–ರಿಕನ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಲೊಯೋಲ ಪದವಿ ಕಾಲೇಜಿನ ಪ್ರಾಂಶುಪಾಲರಾದ ಫಾ. ವಿನೋದ್ ಪೌಲ್ ಮಾತನಾಡಿ, ಮುಂಜಾಗ್ರತೆಯೇ ಅಗ್ನಿ ಸುರಕ್ಷತೆಯ ಮೊದಲ ಮೆಟ್ಟಿಲಾಗಿರುವುದ–ರಿಂದ ಅಗ್ನಿ ಅನಾಹುತ ಸಮಯದಲ್ಲಿ ಪ್ರತಿಯೊಬ್ಬರು ಕೂಡ ಜಾಗೃತರಾಗಿರಬೇಕು ಎಂದು ತಿಳಿಸಿದರು.

ಜಿಲ್ಲಾ ಅಗ್ನಿಶಾಮಕ ಅಧಿಕಾರಿ ರವೀಂದ್ರ ಎ. ಘಾಟಗೆ, ಮಾನ್ವಿ ಪಟ್ಟಣದ ಅಗ್ನಿಶಾಮಕ ಇಲಾಖೆಯ ಠಾಣಾಧಿಕಾರಿಗಳಾದ ರಂಗಪ್ಪ, ಮಾನ್ವಿಯ ಸಹಾಯಕ ಅಗ್ನಿಶಾಮಕ ಠಾಣಾಧಿಕಾ–ರಿಗಳಾದ ಹಾಜಿಮಿಯಾ ನೇತೃತ್ವದಲ್ಲಿ ಅಗ್ನಿಶಾಮಕ ಇಲಾಖೆಯ ಸಿಬ್ಬಂದಿಗಳು ಮಾಕ್ ಡ್ರಿಲ್ ಮೂಲಕ ವಿದ್ಯಾರ್ಥಿಗಳಿಗೆ ತುರ್ತು ಸಂದರ್ಭಗಳಲ್ಲಿ ಅನುಸ–ರಿಸಬೇಕಾದ ಕ್ರಮಗಳ ಬಗ್ಗೆ ಹಾಗೂ ಗ್ಯಾಸ್ ಸಿಲೆಂಡರ್‌ಗೆ ಬೆಂಕಿ ಬಿದ್ದಾಗ ಕೈಗೊಳ್ಳಬೇಕಾದ ಸುರಕ್ಷ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಲೊಯೋಲ ಕಾಲೇಜಿನ ಉಪಪ್ರಾಂಶುಪಾಲರಾದ ಖಾಸಿಂ ಸಾಬ್ ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಇದ್ದರು.

## ಬಳ್ಳಾರಿ ಜಿಲ್ಲೆಗೆ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಬೇಕು– ವೆಂಕಟೇಶ್ ಹೆಗಡೆ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ: ಜಿಲ್ಲೆಗೆ ಪ್ರತ್ಯೇಕ ಬಿಡಿಸಿಸಿ ಬ್ಯಾಂಕ್ ಆರಂಭಿಸಲು ಜಿಲ್ಲೆಯ ರಾಜಕಾರಣಿಗಳು, ಸಹಕಾರಿಗಳು,ಬ್ಯಾಂಕಿನ ನಮ್ಮ ಭಾಗದ ನಿರ್ದೇಶಕರು,ಮತ್ತು ಸಾರ್ವಜನಿಕರು ಸರ್ಕಾರದ ಮೇಲೆ ಒತ್ತಡ ತರಲು ಮುಂದಾಗಬೇಕು ಎಂದು ಕೆಪಿಸಿಸಿ ಮಾಧ್ಯಮ ವಕ್ತಾರ ವೆಂಕಟೇಶ್ ಹೆಗಡೆ ಒತ್ತಾಯಿಸಿದ್ದಾರೆ.**

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು. ಒಂದು ಜಿಲ್ಲೆಗೆ ಒಂದು ಬ್ಯಾಂಕ್ ಎಂದು ಕೇಂದ್ರ ಸರ್ಕಾರದ ಸಹಕಾರಿ ಇಲಾಖೆ ಈ ಹಿಂದೆಯೇ ಜಿಲ್ಲೆಗೆ ಪ್ರತ್ಯೇಕ ಬ್ಯಾಂಕ್ ಆರಂಭಿಸಲು ಬೇಕಾದ ಕ್ರಮ ವಹಿಸುವಂತೆ ಸೂಚನೆ ನೀಡಿದೆ. ಅಗತ್ಯ ಸಿಬ್ಬಂದಿ ನೇಮಕಾತಿ ಸೇರಿದಂತೆ ಮೂಲಭೂತ ಸೌಲಭ್ಯ ಒದಗಿಸಲು ಎಲ್ಲಾ ರೀತಿಯ ಬೆಂಬಲ ನೀಡುವುದಾಗಿ ಘೋಷಿಸಿದೆ. ಇದಕ್ಕೆ ತಕ್ಕಂತೆ ರಾಜ್ಯ ಸಹಕಾರಿ ಇಲಾಖೆಯೂ ಕ್ರಮ ವಹಿಸಿದೆ ಅಧಿಕಾರಿಗಳ ನಿರ್ಲಕ್ಷ್ಯ ಒಂದು ಕಡೆಯಾದರೆ ನಮ್ಮ ಭಾಗದಲ್ಲಿ ಬರುವ ಬ್ಯಾಂಕಿನ ನಿರ್ದೇಶಕರುಗಳ ನಿರಾಸಕ್ತಿಯೂ ಇನ್ನೊಂದು ಕಾರಣವಾಗಿ ಇದುವರೆಗೆ ನಮ್ಮ ಜಿಲ್ಲೆಯಲ್ಲಿ ನಮ್ಮದೇ ಬಿಡಿಸಿಸಿ ಬ್ಯಾಂಕ್ ಆರಂಭ ಆಗಿಲ್ಲ.



ಬಳ್ಳಾರಿ ಜಿಲ್ಲೆ ಆರ್ಥಿಕವಾಗಿ ಸಾಕಷ್ಟು ಪ್ರಬಲವಾಗಿದೆ.ವಾಣಿಜ್ಯ ವಹಿವಾಟುಗಳಲ್ಲಿ ಮುಂದಿದೆ. ಆದ–'ರೆ,ಇದುವರೆಗೆ ನಮಗೆ ಪ್ರತ್ಯೇಕ ಬಿಡಿಸಿಸಿ ಬ್ಯಾಂಕ್ ಇರುವುದಿಲ್ಲ. ಈ ಮೊದಲು ಸಹ ಬಿಡಿಸಿಸಿ ಬ್ಯಾಂಕ್ನ ಪ್ರಧಾನ ಕಚೇರಿ ಹೊಸಪೇಟೆಯಲ್ಲಿಯೇ ಇತ್ತು. ಒಂದೇ ಜಿಲ್ಲೆ ಆಗಿದ್ದರಿಂದ ಎಲ್ಲರೂ ಸಹಕಾರ ಮಾಡಿಕೊಂಡು ಹೋಗಿದ್ದರು. ಆದರೆ, ಇದೀಗ ಜಿಲ್ಲೆ ಆರಂಭವಾಗಿ 6 ವರ್ಷ ಆಗುತ್ತಾ ಬಂದರೂ ಪ್ರತ್ಯೇಕ ಬಿಡಿಸಿಸಿ ಬ್ಯಾಂಕ್ ಆರಂಭ ಆಗಿರುವುದಿಲ್ಲ. ಪ್ರತ್ಯೇಕ ಬಿಡಿಸಿಸಿ ಬ್ಯಾಂಕ್ ಆಗುವುದರಿಂದ ಬ್ಯಾಂಕಿನ ಬ್ರಾಂಚ್ಗಳ ವಿಸ್ತರಣೆಗೆ ಅವಕಾಶ ಆಗಲಿದೆ.ವಿಜಯನಗರ ಜಿಲ್ಲೆಯಲ್ಲಿ ಪ್ರಧಾನ ಕಚೇರಿ ಇರುವುದರಿಂದಲೇ ಅಲ್ಲಿ ಹೋಬಳಿ,ಗ್ರಾಮ ಮಟ್ಟದ ಬಿಡಿಸಿಸಿ ಬ್ಯಾಂಕ್ಗಳು ತಲೆ ಎತ್ತಿವೆ.ನಮ್ಮಲ್ಲಿ ತಾಲ್ಲೂಕು ಮಟ್ಟದಲ್ಲಿ ಬಿಟ್ಟರೆ ಹೋಬಳಿ, ಗ್ರಾಮ ಮಟ್ಟಕ್ಕೆ ಬ್ಯಾಂಕ್ ಪರಿಚಯವೇ ಆಗಿಲ್ಲ. ಈ ತಕ್ಷಣ ನಮ್ಮ ಜಿಲ್ಲೆಯಲ್ಲಿರುವ ಬಿಡಿಸಿಸಿ ಬ್ಯಾಂಕ್ ನಿರ್ದೇಶಕರು, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಸಂಸದರು ಈ ಕಡೆ ಹೆಚ್ಚಿನ ಗಮನ ಹರಿಸಬೇಕು. ಈ ಮೂಲಕ ನಮ್ಮದೇ ಆದ ಪ್ರತ್ಯೇಕ ಬಿಡಿಸಿಸಿ ಬ್ಯಾಂಕ್ ಆರಂಭಕ್ಕೆ ಮುಂದಾಗಬೇಕು ಎಂದಿದ್ದಾರೆ.

## ದಾದಾಪೀರ್ ಹೆಚ್. ಕೊಟ್ಟೂರು ಅವರಿಗೆ ಪ್ರತಿಷ್ಠಿತ 'ಸರಸ್ವತಿ ಕನ್ನಡ ರತ್ನ' ರಾಜ್ಯ ಪ್ರಶಸ್ತಿ ಪ್ರದಾನ

ನೈಜ್ಯ ದೆಸೆ ನ್ಯೂಸ್

**ದಾವಣಗೆರೆ: ಸಾಲಿಗ್ರಾಮದ ಶ್ರೀಮತಿ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನ ಹಾಗೂ ಕಲಾಕುಂಜ ಸಾಂಸ್ಕೃತಿಕ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ನೀಡಲಾಗುವ 2019ನೇ ಸಾಲಿನ 'ಸರಸ್ವತಿ ಕನ್ನಡ ರತ್ನ' ರಾಜ್ಯ ಪ್ರಶಸ್ತಿಯನ್ನು ವಿಜಯನಗರ ಜಿಲ್ಲೆಯ ಶ್ರೀ ದಾದಾಪೀರ್ ಹೆಚ್. ಕೊಟ್ಟೂರು ಅವರಿಗೆ ಪ್ರದಾನ ಮಾಡಲಾಯಿತು.**



ಪತ್ರಿಕೋದ್ಯಮ ಹಾಗೂ ಸಮಾಜ ಸೇವೆ ಕ್ಷೇತ್ರದಲ್ಲಿ ದಾದಾಪೀರ್ ಅವರು ಸಲ್ಲಿಸಿರುವ ಗಣನೀಯ ಸೇವೆಯನ್ನು ಗುರುತಿಸಿ ಈ ಗೌರವವನ್ನು ನೀಡಲಾಗಿದೆ. ದಾವಣಗೆರೆಯ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಕಲ್ಯಾಣ ಮಂಟಪದಲ್ಲಿ ನಡೆದ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಹಸ್ತಾಂತರಿಸಲಾಯಿತು. ಸಂದರ್ಭದಲ್ಲಿ ಪ್ರತಿಷ್ಠಾನದ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್ ಶೆಣೈ, ಅಧ್ಯಕ್ಷರಾದ ಡಾ. ನಾಗೇಶ್ ಸಂಜೀವ ಕಿಣಿ ಬೆಂಗಳೂರು, ಪ್ರಧಾನ ಕಾರ್ಯದರ್ಶಿ ಶ್ರೀ ಶ್ರೀಪತಿ ರಾಘವೇಂದ್ರ ಶೆಣೈ, ಸಾಲಿಗ್ರಾಮ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು. ಪ್ರಶಸ್ತಿ ಪುರಸ್ಕೃತರಾದ ದಾದಾಪೀರ್ ಅವರು ಮುಂದಿನ ದಿನಗಳಲ್ಲಿ ರಾಜ್ಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಇನ್ನಷ್ಟು ಸಾಧನೆ ಮಾಡಿ, ತಮ್ಮ ಹೆತ್ತವರಿಗೆ ಹಾಗೂ ಹುಟ್ಟೂ–ರಿಗೆ ಕೀರ್ತಿ ತರಲಿ ಎಂದು ಸಂಸ್ಥೆಯು ಶುಭ ಹಾರೈಸಿದೆ.

## ಮಹಿಳೆಯರನ್ನು ಗೌರವಿಸುವುದು ದೇಶವನ್ನೇ ಗೌರವಿಸಿದಂತೆ :ಮಹಿಳಾ ಮೀಸಲಾತಿ ಕಾನೂನು ಸ್ವಾಗತಿಸಿದ ಮೋದಿ



ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಸಂಸತ್ತಿನ ವಿಶೇಷ ಅಧಿವೇಶನಕ್ಕೂ ಮುನ್ನ ಮಹಿಳಾ ಮೀಸಲಾತಿ ಸ್ವಾಗತಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಪೋಸ್ಟ್ ಹಂಚಿಕೊಂಡಿದ್ದಾರೆ. ಮಹಿಳಾ ಮೀಸಲಾತಿ ಕುರಿತು ಸಂಸತ್‌ನ ವಿಶೇಷ ಅಧಿವೇಶನದಲ್ಲಿ ಚರ್ಚೆ ನಡೆಯುತ್ತಿದೆ. ಇದಕ್ಕೂ ಮೊದಲು ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಮೋದಿ, 'ದೇಶವು ಮಹಿಳೆಯರ ಸಬಲೀಕರಣದಲ್ಲಿ ಐತಿಹಾಸಿಕ ಹೆಜ್ಜೆ ಇಡಲು ಸಜ್ಜಾಗಿದೆ' ಎಂದು ತಿಳಿಸಿದ್ದಾರೆ.**

ಇಂದಿನಿಂದ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ನಮ್ಮ ದೇಶವು ಮಹಿಳಾ ಸಬಲೀಕರಣದತ್ತ ಐತಿಹಾಸಿಕ ಹೆಜ್ಜೆ ಇಡಲಿದೆ. ನಮ್ಮ ತಾಯಂದಿರು ಮತ್ತು ಸಹೋದರಿಯರಿಗೆ ನೀಡುವ ಗೌರವವು ರಾಷ್ಟ್ರಕ್ಕೆ ನೀಡುವ ಗೌರವವಾಗಿದೆ ಎಂದು ಮೋದಿ ಬರೆದುಕೊಂಡಿದ್ದಾರೆ. ಪೋಸ್ಟ್‌ನಲ್ಲಿ, ಅಜ್ಞಾನವನ್ನು ಹೋಗಲಾಡಿಸುವಲ್ಲಿ ಮತ್ತು ಸಮಾಜವನ್ನು ಜ್ಞಾನದಿಂದ ಬೆಳಗಿಸುವಲ್ಲಿ ಮಹಿಳೆಯರ ಪಾತ್ರವನ್ನು ಎತ್ತಿ ತೋರಿಸುವ ಸಂಸ್ಕೃತ ಶ್ಲೋಕವನ್ನೂ ಮೋದಿ ಹಂಚಿಕೊಂಡಿದ್ದಾರೆ.

ಏಪ್ರಿಲ್ 16 ರಿಂದ 18 ರವರೆಗೆ ನಡೆಯಲಿರುವ ವಿಶೇಷ ಅಧಿವೇಶನವು 2029 ರ ಸಾರ್ವತ್ರಿಕ ಚುನಾವಣೆಗಳಿಂದ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿರುವ ಮಹಿಳಾ ಮೀಸಲಾತಿ ಕಾನೂನನ್ನು ಜಾರಿಗೆ ತರಲು ತಿದ್ದುಪಡಿಯನ್ನು ತೆಗೆದುಕೊಳ್ಳುವ ನಿರೀಕ್ಷೆಯಿದೆ.

## ಪ್ರಾದೇಶಿಕ ಸಾರಿಗೆ ಇಲಾಖೆಯಿಂದ ವಾಹನಗಳ ಬಾಕಿ ತೆರಿಗೆ ಪಾವತಿಸಲು ಸೂಚನೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರಿನ ಪ್ರಾದೇಶಿಕ ಸಾರಿಗೆ ಇಲಾಖೆಯಿಂದ ಮೋಟಾರು ವಾಹನಗಳ ಬಾಕಿ ತೆರಿಗೆ ವಸೂಲಾತಿ ಸಂಬಂಧ 2026ರ ಏಪ್ರಿಲ್ ತಿಂಗಳಿನಿಂದ ವಿಶೇಷ ತೆರಿಗೆ ಬಾಕಿ ವಸೂಲಾತಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು, ಮಾಲೀಕರು ತೆರಿಗೆಯನ್ನು ತಕ್ಷಣವೇ ಆನ್ ಲೈನ್ ಅಥವಾ ಆರ್. ಟಿ. ಓ. ಕಚೇರಿಗೆ ಖುದ್ದು ಭೇಟಿ ನೀಡಿ ಬಾಕಿ ತೆರಿಗೆಯನ್ನು ಪಾವತಿಸಬೇಕೆಂದು ಕೋರಲಾಗಿದೆ.**

ನಿಯಮಾವಳಿಗಳಂತೆ ಯಾವುದೇ ವಾಹನವು ಸಾರ್ವಜನಿಕ ರಸ್ತೆಗೆ ಇಳಿಯುವ ಮೊದಲೇ ಮುಂಗಡವಾಗಿ ತೆ–ರಿಗೆಯನ್ನು ಪಾವತಿ ಮಾಡಬೇಕಾಗಿದೆ. ವಾಹನ ಮಾಲೀಕರು ತೆರಿಗೆ ಪಾವತಿ ಮಾಡದಿದ್ದರೆ. ಸಾರಿಗೆ ಇಲಾಖೆಯಿಂದ ಮಾನ್ಯ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡುತ್ತದೆ. ಈ ಪ್ರಕಟಣೆಯನ್ನು ಇಲಾಖಾ ಸೂಚನೆ ಎಂದು ತಿಳಿದುಕೊಳ್ಳಬೇಕು. ಬಾಕಿ ತೆರಿಗೆ ವಾಹನ ಮಾಲೀಕರು ಜವಾಬ್ದಾರಿ ಮೆರೆತು ಬಾಕಿ ತೆರಿಗೆಯನ್ನು ತಕ್ಷಣವೇ ಪಾವತಿ ಮಾಡಬೇಕೆಂದು ರಾಯಚೂರಿನ ಪ್ರಾದೇಶಿಕ ಸಾರಿಗೆ ಇಲಾಖೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಾಲಿಹಾಳ ಕೇಂದ್ರ ಗ್ರಂಥಾಲಯದಲ್ಲಿ ಮಕ್ಕಳಿಗಾಗಿ ಅರಿವು–ನೆರವು ಬೇಸಿಗೆ ಶಿಬಿರ: ಎಸ್.ನಾಗರಾಜ

ನೈಜ್ಯ ದೆಸೆ ನ್ಯೂಸ್

**ತಾಲೂಕಿನ ಜಾಲಿಹಾಳ ಗ್ರಾಮದ ಗ್ರಂಥ–ಾಲಯದಲ್ಲಿ ಏ.16 ಗುರುವಾರದಂದು ಮಕ್ಕಳಿಗಾಗಿ ಅರಿವು ನೆರವು ಬೇಸಿಗೆ ಶಿಬಿರ ಕಾರ್ಯಕ್ರಮವನ್ನು ಗ್ರಾ.ಪಂ.ಅಭಿವೃದ್ಧಿ ಅಧಿಕಾರಿಗಳಾದ ಜಯಶ್ರೀ ಪಟೇಲ್ ಹಾಗೂ ವಿದ್ಯಾರ್ಥಿ ಬಸವರಾಜ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು.**

ಕೇಂದ್ರ ಗ್ರಂಥ ಪಾಲಕ ಎಸ್.ನಾಗರಾಜ ನಾಗಲಿಕರ್ ಮಾತನಾಡಿ, ವಿದ್ಯಾರ್ಥಿಗಳು ಮತ್ತು ಯುವಕರು ಪ್ರತಿಯೊಬ್ಬರ ಜೀವನದಲ್ಲಿ ಅತ್ಯಂತ ಮಹತ್ವ ಅಂದರೆ ಅದು ಸಮಯ ಇಂತಹ ಸಮಯವನ್ನು ವ್ಯರ್ಥ ಮಾಡದೆ, ಸಮಯಕ್ಕೆ ಅತ್ಯಂತ ಗೌರವ ಕೊಟ್ಟು, ವಿದ್ಯಾರ್ಥಿಗಳು ಗ್ರಂಥಾಲಯದಲ್ಲಿರುವ ಸಮಗ್ರವಾದ ಮಾಹಿತಿಯ ಕೈಪಿಡಿ ಪುಸ್ತಕಗಳು



ಇಲ್ಲಿ ಸಿಗುತ್ತವೆ. ಅತಿ ಹೆಚ್ಚಿನ ಜ್ಞಾನ ಸಂಪಾದನೆಗೆ ವಿದ್ಯಾರ್ಥಿಗಳಿಗೆ ಪುಸ್ತಕಳೇ ಕಾರಣವಾದ್ದರಿಂದ ವಿದ್ಯಾರ್ಥಿಗಳು ಬೇಸಿಗೆಯಲ್ಲಿ ಎಲ್ಲಿಯೂ ಕೂಡ ತಿರುಗಾಡದೆ, ಸಮಯವನ್ನು ವ್ಯರ್ಥ ಮಾಡದೆ, ಶಾಲಾ ಕಾಲೇಜುಗಳು ರಜಾ ಇರುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಭ್ಯಾಸಕ್ಕೆ ನೆರವಾಗಲು ಈ ವಿಶೇಷ ಕಾರ್ಯಕ್ರಮವಾದ ಅರಿವು–ನೆರವು ಮೂಲಕ ಓದುಗರನ್ನು ಸೆಳೆಯುವ ಪ್ರಯತ್ನ ಮಾಡುತ್ತಿದ್ದೇವೆ. ಈ ಕೇಂದ್ರ ಗ್ರಂಥಾಲಯವನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಗ್ರಾ.ಪಂ.ಅಭಿವೃದ್ಧಿ ಅಧಿಕಾರಿ ಜಯಶ್ರೀ ಮಾತನಾಡಿ, ಜಾಲಿಹಾಳ ಗ್ರಾಮದ ಕೇಂದ್ರ ಗ್ರಂಥಾಲಯದಲ್ಲಿ ಯುವಕರಿಗಾಗಿ, ವಿದ್ಯಾರ್ಥಿಗಳಿಗಾಗಿ, ಮಕ್ಕಳಿಗಾಗಿ ಅರಿವು–ನೆರವು ಬೇಸಿಗೆ ಶಿಬಿರ ಹಮ್ಮಿಕೊಂಡಿದ್ದು, ಶ್ಲಾಘನೀಯವಾದದು, ಈ ಗ್ರಂಥಾಲಯಕ್ಕೆ ಒಳಪಡುವ ಎಲ್ಲಾ ಮಕ್ಕಳು ಯುವಕರು ಆದಿಯಾಗಿ ಪ್ರತಿಯೊಬ್ಬರು ತಮ್ಮ ಜ್ಞಾನರ್ಜನೆಗಾಗಿ ಗ್ರಂಥ–ಾಲಯದಲ್ಲಿರುವ ಮಾಹಿತಿಗಳ ಸಂಗ್ರಹಿಸಲು ಸದುಪಯೋಗ ಪಡಿಸಿಕೊಳ್ಳಿ ಎಂದರು. ಈ ವೇಳೆ: ಶಾಲಾ ಶಿಕ್ಷಕರಾದ ಖಾಜಾಸಾಬ್, ವಿ.ಆರ್ ಡಬ್ಲ್ಯೂ ವೀರಭದ್ರಪ್ಪ, ವಿದ್ಯಾರ್ಥಿಗಳಾದ ನಂದೀಶ, ಗುರುಪ್ರಸಾದ, ಸಂಪತಕುಮಾರ, ಬಸವರಾಜ, ಹಾಗೂ ವೀರೇಂದ್ರಗೌಡ, ಸೇ–ರಿದಂತೆ ಅನೇಕ ಮಕ್ಕಳು ಯುವಕರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

# ರಾಯಚೂರು ನಗರದ ವಿವಿಧ ವೃತ್ತ ಮತ್ತು ಜನ ನಿಭಿಡ ಪ್ರದೇಶಗಳಲ್ಲಿ ಉರಿ ಬಿಸಿಲಿನಿಂದ ಜನರಿಗೆ ರಕ್ಷಣೆ ನೀಡಲು ನೆರಳಿನ ವ್ಯವಸ್ಥೆ ಮಾಡುವಂತೆ ಎಐಡಿವೈಓ ಒತ್ತಾಯ.

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರಿನಲ್ಲಿ ದಿನೇ ದಿನೇ ಬಿಸಿಲಿನ ಶಕೆ ಹೆಚ್ಚಳವಾಗುತ್ತಿದೆ. 43 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ ಎಂಬ ವರದಿಯು ನಾಗರಿಕರನ್ನು ಆತಂಕಕ್ಕೆ ದೂಡಿದೆ. ನಾಗರಿಕರು ಬೆಳಿಗ್ಗೆ 10 ಗಂಟೆಯಿಂದಲೇ ಹೊರಗಡೆ ಬರಲು ಅರಸಾಹಸ ಪಡುತ್ತಿದ್ದಾರೆ. ಬಿಸಿಲಿನ ಜಳ ಮತ್ತು ಬಿಸಿ ಮಗಾಳಿ ಜನರನ್ನು ಹೈರಾಣು ಗೊಳಿಸಿದೆ.**

ಸಂಜೆ 4:30 ಆದರೂ ಸಹ ಬಿಸಿಲಿನ ಜಳ ಕಡಿಮೆಯಾಗುತ್ತಿಲ್ಲ. ರಸ್ತೆ ಸಂಚಾರದ ಸಿಗ್ನಲ್‌ಗಳಲ್ಲಿ ನಿಂತುಕೊಳ್ಳುವ ದ್ವಿಚಕ್ರ ವಾಹನ ಸವಾರರು, ಪಾದಚಾರಿಗಳು ಹಾಗೂ ವೃದ್ಧರು ಬಹಳ ಕಷ್ಟ ಅನುಭವಿಸುತ್ತಿದ್ದಾರೆ. ಬಿಸಿಲಿನ ತಾಪಮಾನದಿಂದ ದೇಹದ ಅಸ್ವಸ್ಥತೆ, ದಾಹ, ತಲೆ ಸುತ್ತುವುದು ಹಾಗೂ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿರುವುದು ಕಂಡು ಬರುತ್ತಿದೆ. ಆದ್ದರಿಂದ ಮಹಾನಗರ ಪಾಲಿಕೆಯು ಜನರ ಆರೋಗ್ಯದ ದೃಷ್ಟಿಯಿಂದ ರಾಯಚೂರು ನಗರದಲ್ಲಿ ಸಿಗ್ನಲ್ ಇರುವ ಪ್ರತಿ





ವೃತ್ತದಲ್ಲಿ ನೆರಳಿನ ವ್ಯವಸ್ಥೆಯನ್ನು ಮಾಡಲು ತುರ್ತು ಕ್ರಮ ಕೈಗೊಳ್ಳಬೇಕೆಂದು ಆಲ್ ಇಂಡಿಂ–ಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ ( ಎಐಡಿವೈಓ) ಸಂಘಟನೆಯು ನಾಗರಿಕರ ಪರವಾಗಿ ಮಹಾನಗರ ಪಾಲಿಕೆಯ ಕಾರ್ಯನಿರ್ವಾಹಕ ಅಭಿಯಂತರರಾದ ಬಸವರಾಜ್ ಅವ–ರಿಗೆ ಇಂದು ಮನವಿ ಪತ್ರ ಸಲ್ಲಿಸಿತು.

ಜಿಲ್ಲೆಯಲ್ಲಿ ಒಂದೂವರೆ ತಿಂಗಳು ಪ್ರಕರ ಬಿಸಿಲು ಮುಂದುವರೆಯಲಿದೆ. ಅಷ್ಟೇ ಅಲ್ಲದೇ ಒಂದು ವಾರ ಗರಿಷ್ಠ 42 ರಿಂದ 43 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಲಿದೆ ಎಂದು ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಅಧಿಕಾ–ರಿಗಳು ಹೇಳಿರುವುದು ವರದಿಯಾಗಿದೆ. ಈ ಹಿನ್ನೆಲೆಯಲ್ಲಿ, ನಗರದ ಪ್ರಮುಖ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ತಾತ್ಕಾಲಿಕ ಅಥವಾ ಶಾಶ್ವತ ನೆರಳಿನ ವ್ಯವಸ್ಥೆ (ಶೆಡ್‌ಗಳು ಅಥವಾ ಷೆಲ್ಟರ್‌ಗಳು) ಕಲ್ಪಿಸುವುದು ಅತ್ಯಂತ ಅಗತ್ಯವಾಗಿದೆ. ಮಹಾನಗರ ಪಾಲಿಕೆಯು ನೆರಳಿನ ವ್ಯವಸ್ಥೆಯನ್ನು ಮಾಡುವುದಾಗಿ ಹೇಳಿದೆ. ಆದರೆ ಅತ್ಯಂತ ತುರ್ತಾಗಿ ಈ ನೆರಳಿನ ವ್ಯವಸ್ಥೆಯನ್ನು ಮಾಡಬೇಕು. ಪಾಲಿಕೆಯು ಕೆಲವು ಸ್ಥಳಗಳಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ 'ಅಮೃತ ನೆರಳು' ಕೇಂದ್ರಗಳನ್ನು ಕಳೆದ ವರ್ಷವೇ ಸ್ಥಾಪಿಸಿರುವುದು ಸ್ವಾಗತಾರ್ಹವಾದ ಕೆಲಸವಾಗಿದೆ. ಆದರೆ ಅವು ಕೆಲವೇ ವೃತ್ತಗಳಿಗೆ ಸೀಮಿತಗೊಂಡಿವೆ. ಅವುಗಳನ್ನು ಮತ್ತಷ್ಟು ಸ್ಥಳಗಳಲ್ಲಿ ಸ್ಥಾಪಿಸಬೇಕು, ತಣ್ಣನೆಯ ಕುಡಿಯುವ ನೀರನ್ನು ನಿರಂತರವಾಗಿ ಇರುವಂತೆ ನೋಡಿಕೊಳ್ಳಬೇಕು ಹಾಗೂ ಬಿಸಿಲಿನ ತಾಪಮಾನವನ್ನು ನಿಯಂತ್ರಿಸಲು ರಸ್ತೆಯ ಮೇಲೆ ನೀರು ಸಿಂಪಡಿಸುವ ಕ್ರಮವನ್ನು ಕೈಗೊಳ್ಳಬೇಕೆಂದು ಈ ಮೂಲಕ ಆಲ್ ಇಂಡಿಯಾ ಡೆಮಾಕ್ರೆಟಿ–ಕ್ ಯೂತ್ ಆರ್ಗನೈಸೇಷನ್(ಎಐಡಿವೈಓ) ಜಿಲ್ಲಾ ಸಮಿತಿ ಮನವಿ ಮಾಡಿ ಒತ್ತಾಯಿಸಿದೆ.

**ಬೇಡಿಕೆಗಳು:**

❂ ರಾಯಚೂರು ನಗರದ ಸಂಚಾರ ಸಿಗ್ನಲ್ ಇರುವ ವೃತ್ತಗಳಲ್ಲಿ ಮತ್ತು ಜನನಿಬಿಡ ಪ್ರದೇಶಗಳಲ್ಲಿ ಬಿಸಿಲಿನಿಂದ ರಕ್ಷಣೆ ಒದಗಿಸಲು ನೆರಳಿನ ವ್ಯವಸ್ಥೆ ಮಾಡಬೇಕು.

❂ ಅಮೃತ ನೆರಳು ಎಂಬ ಕುಟೀರಗಳನ್ನು ಮತ್ತಷ್ಟು ವೃತ್ತಗಳಲ್ಲಿ ಸ್ಥಾಪಿಸಿ, ಜನರಿಗೆ ನಿರಂತರವಾಗಿ ಕುಡಿಯುವ ನೀರಿನ ಅನುಕೂಲ ಮಾಡಬೇಕು.

❂ ಬಿಸಿಲಿನ ತಾಪಮಾನ 43 ಡಿಗ್ರಿ ಸೆಲ್ಸಿಯಸ್ ದಾಖಲಾಗಿರುವುದು ಮತ್ತು ಬಿಸಿ ಗಾಳಿ ಬೀಸುತ್ತಿರುವುದರಿಂದ ರಸ್ತೆಗಳಲ್ಲಿ ನೀರು ಸಿಂಪಡಿಸಿ ತಾಪಮಾನವನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು

ಮೌನೇಶ್
ಎಐಡಿವೈಓ, ರಾಯಚೂರು...ಮಹಾನಗರ ಪಾಲಿಕೆಯ ಆಯುಕ್ತರಿಗೆ ಮನವಿ ಪತ್ರ ನೀಡಿದ ನಿಯೋಗದಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷರಾದ ಚನ್ನಬಸವ ಜಾನೇಕಲ್ ಜಿಲ್ಲಾ ಕಾರ್ಯದರ್ಶಿ ವಿನೋದ್ ಕುಮಾರ್ ಸಂಘಟನೆಯ ಪದಾಧಿಕಾ–ರಿಗಳಾದ , ಮೌನೇಶ್, ನೂರ್ ಪಾಶಾ, ಅಶೋಕ್, ಹಿರಿಯ ನಾಗರಿಕರಾದ ವೀರೇಶ್ ಬಾಬು, ವೀರಭದ್ರಯ್ಯ ಸ್ವಾಮಿ, ಮಹೇಂದ್ರ ಸಿಂಗ್, ರುದ್ರಯ್ಯ ಗುಣಾರಿ, ಅಣ್ಣಪ್ಪ, ತಾಯಪ್ಪ ಮುಂತಾದವರು ಇದ್ದರು.

# ನೇಮಕಾತಿ ಪ್ರಕಟಣೆ

ಲಕ್ನೋದ ಯುಪಿ ಸಹಕಾರಿ ಬ್ಯಾಂಕ್ ನೇಮಕಾತಿ 2026 ಅಧಿಸೂಚನೆಯನ್ನು ಯುಪಿ ಸಹಕಾರಿ ಸಾಂಸ್ಥಿಕ ಸೇವಾ ಮಂಡಳಿ (ಯುಪಿಎಸ್ಐಎಸ್ಬಿ) ಬಿಡುಗಡೆ ಮಾಡಿದೆ, ಸಂಯೋಜಿತ ಸಹಕಾರಿ ಬ್ಯಾಂಕಿಂಗ್, ಬ್ಯಾಂಕಿಂಗ್ ಅಲ್ಲದ ಮತ್ತು ತಾಂತ್ರಿಕ ಸೇವೆಗಳ ಪರೀಕ್ಷೆ (ಸಾಮಾನ್ಯ ನೇಮಕಾತಿ) 2026 ಅಧಿಸೂಚನೆಗಾಗಿ, ಉತ್ತರ ಪ್ರದೇಶದಾದ್ಯಂತ ವಿವಿಧ ಜಿಲ್ಲಾ ಸಹಕಾರಿ ಬ್ಯಾಂಕುಗಳು, ಯುಪಿ ಸಹಕಾರಿ ಬ್ಯಾಂಕ್ ಮತ್ತು ಸಹಕಾರಿ ಒಕ್ಕೂಟಗಳಲ್ಲಿ ಮ್ಯಾನೇಜರ್, ಜೂನಿಯರ್ ಮ್ಯಾನೇಜರ್, ಸಹಾಯಕ/ಕ್ಯಾಷಿಯರ್, ಬ್ಯಾಂಕಿಂ-ಗ್ ಸಹಾಯಕ, ಸ್ಟೆನೋಗ್ರಾಫರ್, ಸಹಾಯಕ/ಟೈಪಿಸ್ಟ್, ಅಕೌಂಟೆಂಟ್, ಜೂನಿಯರ್ ಎಂಜಿನಿಯರ್ ಮತ್ತು ಸಹಾಯಕ ಎಂಜಿನಿಯರ್ ಹುದ್ದೆಗಳಿಗೆ ಅರ್ಹ ಭಾರತೀಯ ನಾಗರಿಕ-ರಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವಿಧ ಸಹಕಾರಿ ಸಂಸ್ಥೆಗಳ ಅಡಿಯಲ್ಲಿ ಈ ಶಾಶ್ವತ ಖಾಲಿ ಹುದ್ದೆಗಳಿಗೆ ಆನ್‌ಲೈನ್ ಅರ್ಜಿ ಪ್ರಕ್ರಿಯೆಯನ್ನು ಅಧಿಕೃತ ಯುಪಿ-ಎಸ್ಐಎಸ್ಬಿ ಪೋರ್ಟಲ್ ಮೂಲಕ ಮಾತ್ರ 25 ಏಪ್ರಿಲ್ 2026 ರಿಂದ 15 ಮೇ 2026 ರವರೆಗೆ ನಡೆಸಲಾಗುತ್ತದೆ ಅಧಿಕೃತ ವೆಬ್‌ಸೈಟ್ upcisb.upsdc.gov.in.

## ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ವಿವಿಧ ಹುದ್ದೆಗಳ ಭರ್ತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್


**ರಾಯಚೂರು: ಜಿಲ್ಲೆಯ ಅರಕೇರಾ ತಾಲೂಕಿನ ಕೊತ್ತದೊಡ್ಡಿಯ ಏಕಲವ್ಯ ಮಾದರಿ ವಸತಿ ಶಾಲೆ ಮತ್ತು ಕಾಲೇಜಿನಲ್ಲಿ 2026-27ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಖಾಲಿಯಿರುವ ವಿವಿಧ ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ ನೇರ ಸಂದರ್ಶನದ ಮೂಲಕ ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.ಕನ್ನಡ ಶಿಕ್ಷಕರ 01ಹುದ್ದೆಗೆ ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಮತ್ತು ಬಿ.ಎಡ್ ಶೈಕ್ಷಣಿಕ ಅರ್ಹತೆ ಹೊಂದಿರುವ 40ವರ್ಷದೊಳಗಿನ ಅಭ್ಯರ್ಥಿಗಳಿಗೆ 35 ಸಾವಿರ ರೂ. ವೇತನ ನೀಡಲಾಗುವುದು.**

ಕಂಪ್ಯೂಟರ್ ವಿಜ್ಞಾನ, ಮಹಿಳಾ ಕ್ರೀಡಾ ತರಬೇತುದಾರರು, ಸಂಗೀತ ಶಿಕ್ಷಕರ ತಲಾ 01 ಹುದ್ದೆಗೆ ಸಂಬಧಿತ ಸ್ನಾತಕ ಪದವಿ ಮತ್ತು ಬಿ.ಎಡ್ ಶೈಕ್ಷಣಿಕ ಅರ್ಹತೆ ಹೊಂದಿರುವ 35ವರ್ಷದೊಳಗಿನ ಅಭ್ಯರ್ಥಿಗಳಿಗೆ 33 ಸಾವಿರ ರೂ. ವೇತನ ನೀಡಲಾಗುವುದು. ಶೈಕ್ಷಣಿಕ ಸಲಹೆಗಾರ 01 ಹುದ್ದೆಗೆ ಮನೋವಿಜ್ಞಾನದಲ್ಲಿ / ಕ್ಲಿನಿಕಲ್ ಮನೋವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಶೈಕ್ಷಣಿಕ ಅರ್ಹತೆ ಹೊಂದಿರುವ 30ವರ್ಷದೊಳಗಿನ ಅಭ್ಯರ್ಥಿಗಳಿಗೆ 35,400 ರೂ. ವೇತನ ನೀಡಲಾಗುವುದು. ಸ್ಟಾಫ್ ನರ್ಸ್ 01 ಹುದ್ದೆಗೆ ಬಿ.ಎಸ್ಸಿ. ನರ್ಸಿಂಗ್/ ಡಿಪ್ಲೊಮಾ ಇನ್ ಜಿ.ಎನ್.ಎಂ ಪದವಿ ಪಡೆದ 35 ವರ್ಷದೊಳಗಿನ ಅಭ್ಯರ್ಥಿಗಳಿಗೆ 29,200 ರೂ. ವೇತನ ನೀಡಲಾಗುವುದು. ಕ್ಯಾಟರಿಂಗ್ ಅಸಿಸ್ಟೆಂಟ್ 01ಹುದ್ದೆಗೆ ಹೋಟೆಲ್ ಮ್ಯಾನೆಜ್‌ಮೆಂಟ್/ ಕ್ಯಾಟರಿಂಗ್/ ಹಾಸ್ಪಿಟಾಲಿಟಿ ವಿಷಯಗಳಲ್ಲಿ ಮೂರು ವರ್ಷಗಳ ಪದವಿ ಪಡೆದ 35 ವರ್ಷದೊಳಗಿನ ಅಭ್ಯರ್ಥಿಗಳಿಗೆ 25,200 ರೂ. ವೇತನ ನೀಡಲಾಗುವುದು. ಎಲೆಕ್ಟ್ರಿಷಿಯನ್ ಕಂ. ಪ್ಲಂಬರ್ 01 ಹುದ್ದೆಗೆ 10ನೇ ತರಗತಿ + ಐ.ಟಿ.ಐ. ಅಥವಾ ಡಿಪ್ಲೋಮಾ ಪಡೆದ 45 ವರ್ಷದೊಳಗಿನ ಅಭ್ಯರ್ಥಿಗಳಿಗೆ 19.900 ರೂ. ವೇತನ ನೀಡಲಾಗುವುದು. ಹೆಡ್ ಕುಕ್- ಮುಖ್ಯ ಅಡುಗೆಗಾರರು (ಪುರುಷ) 01 ಹುದ್ದೆಗೆ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. 35ವರ್ಷದೊಳಗಿನ ಅಭ್ಯರ್ಥಿಗಳಿಗೆ 15,069 ರೂ. ವೇತನ ನೀಡಲಾಗುವುದು. ಅಡುಗೆ ಸಹಾಯಕರು (ಪುರುಷ) 02 ಹುದ್ದೆಗಳಿಗೆ 10ನೇ ತರಗತಿಯಲ್ಲಿ ಉತ್ತೀರ್ಣರಾದ 30 ವರ್ಷದೊಳಗಿನ ಅಭ್ಯರ್ಥಿಗಳಿಗೆ 14,069 ರೂ. ವೇತನ ನೀಡಲಾಗುವುದು. ಸೆಕ್ಯುರಿಟಿ ಗಾರ್ಡ್- ಭದ್ರತಾ ಸಿಬ್ಬಂದಿ 02ಹುದ್ದೆಗೆ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. 30 ವರ್ಷದೊಳಗಿನ ಅಭ್ಯರ್ಥಿಗಳಿಗೆ 15 ಸಾವಿರ ರೂ. ವೇತನ ನೀಡಲಾಗುವುದು. ಗಾರ್ಡನರ್ 01 ಹುದ್ದೆಗೆ ಹಾಗೂ ಸ್ವೀಪರ್ 01ಹುದ್ದೆಗೆ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. 30 ವರ್ಷದೊಳಗಿನ ಅಭ್ಯರ್ಥಿಗಳಿಗೆ 15 ಸಾವಿರ ರೂ. ವೇತನ ನೀಡಲಾಗುವುದು. ಆಸಕ್ತಿಯುಳ್ಳವರು ಇತ್ತೀಚಿನ ವೈಯಕ್ತಿಕ ವಿವರಗಳೊಂದಿಗೆ (ಒಂದು ಇತ್ತೀಚಿನ ಭಾವಚಿತ್ರ) ತಮ್ಮ ವಿದ್ಯಾಭ್ಯಾಸದ ಒಂದು ಸೆಟ್ ನಕಲು ಪ್ರತಿಯನ್ನು ಏಪ್ರಿಲ್ 23ರೊಳಗಾಗಿ ಅರ್ಜಿಯನ್ನು ಸಲ್ಲಿಸಿ, ಏಪ್ರಿಲ್ 28ರಂದು ಸಂದರ್ಶನಕ್ಕೆ ಹಾಜರಾಗಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಏಕಲವ್ಯ ಮಾದರಿ ವಸತಿ ಶಾಲೆ ಮತ್ತು ಕಾಲೇಜಿನ ಪ್ರಾಂಶುಪಾಲರಾದ ಸುರೇಶ್ ಕುಮಾರ್ ವರ್ಮ, ಮೊ.ಸಂ. 6306092667 ಅಥವಾ ಇಂಗ್ಲೀಷ್ ಶಿಕ್ಷಕರಾದ ರವಿಕುಮಾರ್ ಜಿ. ಮೊ. ಸಂಖ್ಯೆ: 7090104974ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಏಕಲವ್ಯ ಮಾದರಿ ವಸತಿ ಶಾಲೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪೋತ್ನಾಳ್ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಗತ್ಯ ಆರೋಗ್ಯ ಸೌಲಭ್ಯ ಕಲ್ಪಿಸಿ: ಯಂಕೋಬ ನಾಯಕ್

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಪೋತ್ನಾಳ್ ಗ್ರಾಮದಲ್ಲಿನ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಜನವೇದಿಕೆ ಸಮಿತಿ ವತಿಯಿಂದ ನಮ್ಮ ಆರೋಗ್ಯ ನಮ್ಮ ಹಕ್ಕು ಅಭಿಯಾನದಡಿಯಲ್ಲಿ ಜನಸಂಪರ್ಕ ಸಭೆಯ ಮೂಲಕ ತಾಲೂಕು ಆರೋಗ್ಯಧಿಕಾರಿ ಡಾ.ಶರಣಬಸವರಾಜ ರವರಿಗೆ ಜನವೇದಿಕೆ ಸದಸ್ಯರಾದ ಯಂಕೋಬ ನಾಯಕ್ ಮನವಿ ಸಲ್ಲಿಸಿ ಮಾತನಾಡಿ ಪೋತ್ನಾಳ್ ಗ್ರಾಮದಲ್ಲಿನ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸುತ್ತ ತಡೆಗೋಡೆ, ಮೂಲಭೂತ ಸೌಕರ್ಯಗಳ ವ್ಯವಸ್ಥೆ ಮಾಡಬೇಕು, ರಾತ್ರಿ ವೇಳೆ ಕೂಡ ರೋಗಿಗಳಿಗೆ ಚಿಕಿತ್ಸೆ ನೀಡಬೇಕು.**



ಖಾಲಿ ಇರುವ ವೈದ್ಯರನ್ನು ಹಾಗೂ ಸಿಬ್ಬಂದಿಗಳನ್ನು ನೇಮಕ ಮಾಡಬೇಕು. ಆಸ್ಪತ್ರೆಯಲ್ಲಿ ರಕ್ತಪರೀಕ್ಷೆ, ಕುಟುಂಬ ನಿಯಂತ್ರಣ ಯೋಜನೆಯ ಶಸ್ತ್ರಚಿಕಿತ್ಸೆಗಳು, ಹೆ-ರಿಗೆಗಳು, ತಪಾಸಣೆಗಳು, 108 ಅಂಬುಲೇನ್ಸ್ ವ್ಯವಸ್ಥೆ , ನಾಯಿ ಕಡಿತಕ್ಕೆ ಸೇರಿದಂತೆ ಅಗತ್ಯ ಔಷಧಿಗಳ ಸಂಗ್ರಹಣೆ ಮಾಡಿ ರೋಗಿಗಳಿಗೆ ನೀಡಬೇಕು, ಶುದ್ದ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ಮನವಿ ಸ್ವಿಕರಿಸಿ ತಾಲೂಕಾ ವೈದ್ಯಾಧಿಕಾರಿ ಡಾ.ಶರಣಬಸವರಾಜ ಮಾತನಾಡಿ ಪ್ರಾಥ-'ಮಿಕ ಆರೋಗ್ಯ ಕೇಂದ್ರದಲ್ಲಿ ಅಗತ್ಯ ವ್ಯವಸ್ಥೆ ಮಾಡಲಾಗುವುದು ಗುಣಮಟ್ಟದ ಚಿಕಿತ್ಸೆ ನೀಡುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಬರವಸೆ ನೀಡಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಹನುಮೇಶ ನಾಯ್ಕ, ಜನವೇದಿಕೆ ಸದಸ್ಯರಾದ ಯಂಕೋಬ ನಾಯಕ್, ಈಶಮ್ಮ, ಸಿದ್ದಲಿಂಗಮ್ಮ, ಹಂಪಯ್ಯ, ದೇವರಾಜ್, ಸುಂಕ್ಲಮ್ಮ, ದೇವರಾಜ ಕೋಟ್ನೇಕಲ್, ಶ್ರೀದೇವಿ, ಸದಾನಂದ, ಜನಜಾಗೃತಿ ರಾಜ್ಯಧ್ಯಕ್ಷರಾದ ಯೇಸಪ್ಪ, ಕರ್ನಾಟಕ ದಲಿತ ಸಂಘಟನೆಯ ಶೀವಜ್ಞಾನಿ , ರೈತ ಮುಖಂಡರಾದ ರಾಜಾಸಾಬ್, ಕಟ್ಟಡ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷರಾದ ಚಿನ್ನಪ್ಪ ಪನ್ನೂರು, ಮಾಜಿ ಗ್ರಾಮಪಂಚಾಯತಿ ಅಧ್ಯಕ್ಷ ಈರಣ್ಣ, ಸೇರಿದಂತೆ ನೂರಾರು ಜನವೇದಿಕೆ ಸದಸ್ಯರು ಭಾಗವಹಿಸಿದರು .

## ಪ್ರಶಿಕ್ಷಣಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಿಂದ ಭಾವಿ ಶಿಕ್ಷಕರಾಗಿ :ಎಸ್ ಎಸ್ ಪಾಟೀಲ್



ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪ್ರಶಿಕ್ಷಣಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಿಂದ ಭಾವಿ ಶಿಕ್ಷಕರಾಗಿ ಎಂದು ಎಸ್ ಎಸ್ ಪಾಟೀಲ್ ಹೇಳಿದರು.ಪಟ್ಟಣದ ಶಾರದಾ ವಿದ್ಯಾನಿಕೇತನ ಡಿಎಡ್ ಕಾಲೇಜಿನಲ್ಲಿ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಂದ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಬಿಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿಎಸ್ ಎಸ್ ಪಾಟೀಲ್ ಪ್ರಾಚಾರ್ಯರು ಕಲ್ಮಠ ಪದವಿ ಪೂರ್ವ ಕಾಲೇಜು ಇವರು ಪ್ರಶಕ್ಷಣಾರ್ಥಿಗಳನ್ನು ಕು-ರಿತು ಮಾತನಾಡುತ್ತಾ ಪ್ರಶಿಕ್ಷಣಾರ್ಥಿಗಳು ತಮ್ಮ ಸತತ ಪ್ರಯತ್ನದ ಮೂಲಕ ಮತ್ತು ಶಿಕ್ಷಕರ ಸೂಕ್ತ ಮಾರ್ಗದರ್ಶನದ ಮೂಲಕ ಭವಿಷ್ಯದಲ್ಲಿ ಉತ್ತಮ ಶಿಕ್ಷಕರಾಗಬಹುದು ಎನ್ನುವಂತ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.ಈ ಕಾರ್ಯಕ್ರಮವನ್ನು ಉದ್ಘಾಟಿಸಿದಂತಹ ಶಾರದಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಡಾಕ್ಟರ್ ಹೈಂದವಿ ಉದ್ಘಾಟನಾ ನುಡಿಯನ್ನು ನುಡಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದಂತ ಡಿಎಡ್ ಕಾಲೇಜಿನ ಪ್ರಾಚಾರ್ಯರಾದ ಹನುಮಂತಗೌಡ ಅವರು ಪ್ರಶಿಕ್ಷಣಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಉತ್ತಮ ಭವಿಷ್ಯವಿದೆ ತಾವೆಲ್ಲರೂ ಪ್ರಯತ್ನದ ಮೂಲಕ ಅವಕಾಶಗಳನ್ನ ಸದುಪಯೋಗಪಡಿಸಿಕೊಳ್ಳಿ ಎಂದು ತಿಳಿಸಿದರು ಈ ಕಾರ್ಯಕ್ರಮದಲ್ಲಿ ಡಿಎಡ್ ಕಾಲೇಜಿನ ಉಪನ್ಯಾಸಕರಾದ ಹನುಮಂತಪ್ಪ ಹ-ರಿವಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು ಈ ಕಾರ್ಯಕ್ರಮದಲ್ಲಿ ಶಾರದಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಉಮಾಮಹೇಶ್ವರಿ, ಶಾರದಾ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾದ ಬಿ ಕಿಶೋರ್ ಕುಮಾರ್. ಮಂಜುಳಾ ಕಿಶೋರ್ ಕುಮಾರ್ ಬಿ ಇಡಿ ಕಾಲೇಜಿನ ಪ್ರಾಚಾರ್ಯರಾದ ಡಾ.ಪರಮೇಶ್ವರಪ್ಪ ಗೋಪಾಶೆಟ್ಟಿ ಹಾಗೂ ಕಾಲೇಜಿನ ಎಲ್ಲಾ ಉಪನ್ಯಾಸಕರು ಪಾಲ್ಗೊಂಡಿದ್ದರು ಈ ಕಾರ್ಯಕ್ರಮವನ್ನು ಪ್ರಥಮ ವರ್ಷದ ಪ್ರಶಕ್ಷಣಾರ್ಥಿಯಾದ ರತ್ನ ನಿರೂಪಿಸಿದರು ಮೌನೇಶ್ ಸ್ವಾಗತಿಸಿದರು ಶ್ರೀದೇವ ವಂದಿಸಿದರು.

## NSS ವಿದ್ಯಾರ್ಥಿಗಳಿಗೆ ಜೀವನದ ಪಾಠ ಕಲಿಸುತ್ತದೆ.ಪ್ರಾಚಾರ್ಯ ಸಿಂಧೆ.

ನೈಜ್ಯ ದೆಸೆ ನ್ಯೂಸ್

**ಚಿಟಗುಪ್ಪ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಚಿಟಗುಪ್ಪದಲ್ಲಿ ರಾಷ್ಟ್ರೀಯ ಸೇವಾ ಯೋಜನೆ (NSS) ಸಮಾರೋಪ ಕಾರ್ಯಕ್ರಮವು ವಿಶೇಷವಾಗಿ ನಡೆಯಿತು. ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು, ಇದು ಪರಿಸರ ಪ್ರೀತಿ ಮತ್ತು ಸೇವಾಭಾವನೆಯ ಪ್ರತೀಕವಾಗಿ ಮೂಡಿಬಂತು.**




ಕಾರ್ಯಕ್ರಮವನ್ನು ಉದ್ಘಾಟಿಸಿದ ಬೀದರ್ ವಿಶ್ವವಿದ್ಯಾಲಯದ ಓಖಖ ಯೋಜನಾಧಿಕಾರಿ ರವೀಂದ್ರ ಗಬಾಡೆ ಅವರು ಓಖಖ ಯೋಜನೆಯ ಮಹತ್ವವನ್ನು ವಿವರಿಸಿದರು. ಯುವಕರಲ್ಲಿ ಸಾಮಾಜಿ-ಕ ಹೊಣೆಗಾರಿಕೆ ಬೆಳೆಸುವುದು ಹಾಗೂ ಸೇವಾ ಮನೋಭಾವವನ್ನು ಉತ್ತೇಜಿಸುವುದೇ ಈ ಯೋಜನೆಯ ಮುಖ್ಯ ಗುರಿಯಾಗಿದೆ ಎಂದು ಹೇಳಿದರು.ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕ ಅಧ್ಯಕ್ಷ ಅನೀಲಕುಮಾರ್ ಸಿಂಧೆ ಅವರು ಮಾತನಾಡಿ,ಯುವಕರು ದೇಶ ನಿರ್ಮಾಣದ ಶಕ್ತಿ. ಓಖಖ ಮೂಲಕ ಶಿಸ್ತು, ನಾಯಕತ್ವ ಮತ್ತು ಜವಾಬ್ದಾರಿ ಬೆಳೆಸಿಕೊಳ್ಳಬಹುದು" ಎಂದು ಹೇಳಿದರು.ಪತ್ರಕರ್ತ ರಾಜ-ಕುಮಾರ ಆರ್ ಹಡಪದ ಅವರು NSS ಮೂಲಕ ಗ್ರಾಮೀಣಾಭಿವೃದ್ಧಿ, ಪರಿಸರ ಸಂರಕ್ಷಣೆ, ಆರೋಗ್ಯ ಜಾಗೃತಿ ಮತ್ತು ಸ್ವಚ್ಛತಾ ಅಭಿಯಾನಗಳಲ್ಲಿ ಭಾಗವಹಿಸುವ ಮೂಲಕ ವಿದ್ಯಾರ್ಥಿಗಳು ಜೀವನಾನುಭವ ಪಡೆಯುತ್ತಾರೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾಕ್ಟರ್,ಜಯಕುಮಾರ ಸಿಂಧೆ ಅವರು,ಓಖಖ ವಿದ್ಯಾರ್ಥಿಗಳನ್ನು ಉತ್ತಮ ನಾಗರಿಕರನ್ನಾಗಿ ರೂಪಿಸುವ ವೇದಿಕೆ. ಇಲ್ಲಿ ಕಲಿಯುವುದು ಪುಸ್ತಕಕ್ಕಿಂತ ದೊಡ್ಡದು ಜೀವನ ಪಾಠ!" ಎಂದು ಅಭಿಪ್ರಾಯಪಟ್ಟರು.ಈ ಸಂದರ್ಭದಲ್ಲಿ ಪುರಸಭೆಯ ಮಾಜಿ ಸದಸ್ಯ ವಿಶಾಲ ಬೋರಾಳೆ, ನರಸಪ್ಪ ನರನಾಳ, ಕೀರಣ ಐನಾಪೂರ ಸೇರಿದಂತೆ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಶ್ರೀ ಸಿದ್ಧಾಶ್ರಮದಲ್ಲಿ 10ನೇ ದಿನದ ಶಿಬಿರಡಾ. ಕೆ. ದೊಡ್ಡ ಬಸವ ಅವರಿಂದ ಪ್ರೇರಣಾದಾಯಕ ಉಪನ್ಯಾಸ



ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಶ್ರೀ ಸಿದ್ದಾಶ್ರಮದಲ್ಲಿ ಜರುಗುತ್ತಿರುವ ವೇದ ಜ್ಯೋತಿಷ್ಯ ಸಂಸ್ಕಾರ ಶಿಬಿರದ 10ನೇ ದಿನದ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಿತು. ಕಾರ್ಯಕ್ರಮದಲ್ಲಿ ಸಿಂಧನೂರಿನ ಬಸವ ಮಕ್ಕಳ ಆಸ್ಪತ್ರೆಯ ಮಕ್ಕಳ ತಜ್ಞರಾದ ಡಾ. ಕೆ. ದೊಡ್ಡ ಬಸವ ಅವರು ವಿಶೇಷ ಅತಿಥಿಯಾಗಿ ಭಾಗವಹಿಸಿ ಮಕ್ಕಳಿಗೆ ಜೀವನ ಮೌಲ್ಯಗಳ ಕುರಿತು ಮಾರ್ಗದರ್ಶನ ನೀಡಿದರು.**

ಮಕ್ಕಳನ್ನುದ್ದೇಶಿಸಿ ಮಾತನಾಡಿದ ಅವರು ತಮ್ಮ ವೃತ್ತಿ ಜೀವನದ ಅನುಭವಗಳನ್ನು ಹಂಚಿಕೊಂಡು, ಯಶಸ್ಸು ಸಾಧಿಸಲು ಶಿಕ್ಷಣದ ಜೊತೆಗೆ ಸಂಸ್ಕಾರ, ಶಿಸ್ತು, ಪರಿಶ್ರಮ ಮತ್ತು ಗುರಿ ಸಾಧನೆಯ ಮನೋಭಾವ ಅತ್ಯಂತ ಅಗತ್ಯವೆಂದು ತಿಳಿಸಿದರು. ಬಾಲ್ಯದಲ್ಲಿಯೇ ಉತ್ತಮ ಚಿಂತನೆ ಹಾಗೂ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡರೆ ಸಮಾಜಕ್ಕೆ ಉಪಯುಕ್ತ ನಾಗ-ರಿಕರಾಗಿ ಬೆಳೆಯಲು ಸಾಧ್ಯವೆಂದು ಹೇಳಿದರು. ಆರೋಗ್ಯದ ಮಹತ್ವ, ಸಮಯಪಾಲನೆ, ಹಿರಿಯರ ಗೌರವ ಹಾಗೂ ಸಮಾಜ ಸೇವೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ಮಕ್ಕಳಿಗೆ ಸಲಹೆ ನೀಡಿದರು. ಆತ್ಮವಿಶ್ವಾಸ ಮತ್ತು ಧನಾತ್ಮಕ ಚಿಂತನೆ ಜೀವನದಲ್ಲಿ ಯಶಸ್ಸಿನ ದಾ-ರಿಯನ್ನು ತೆರೆದಿಡುತ್ತದೆ ಎಂದು ಅವರು ಹೇಳಿದರು.

ಶಿಬಿರದಲ್ಲಿ ಭಾಗವಹಿಸಿದ ಮಕ್ಕಳು ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಪಾಲ್ಗೊಂಡು ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಮಕ್ಕಳಿಗೆ ಪ್ರೇರಣಾದಾಯಕ ವಾತಾವರಣ ನಿರ್ಮಾಣವಾಗಿದ್ದು, ಶಿಬಿರದ ಉದ್ದೇಶ ಸಾಥ-'ಕಗೊಂಡಿತು. ಶಿಬಿರದ ಆಯೋಜಕರು ಅತಿಥಿ-ಯನ್ನು ಸನ್ಮಾನಿಸಿ ಅಭಿನಂದಿಸಿದರು. ವೇದ ಸಂಸ್ಕೃತಿ, ಜ್ಯೋತಿಷ್ಯ ಜ್ಞಾನ ಹಾಗೂ ನೈತಿ-ಕ ಮೌಲ್ಯಗಳನ್ನು ಮಕ್ಕಳಲ್ಲಿ ಬೆಳೆಸುವ ಉದ್ದೇಶದಿಂದ ಶಿಬಿರ ಯಶಸ್ವಿಯಾಗಿ ನಡೆಯುತ್ತಿದೆ.

# ದೇವದುರ್ಗ ತಾಲೂಕಿನ ವಿವಿಧ ಹಳ್ಳಿಗಳಿಗೆ ಆರ್.ಸಿ.ಹೆಚ್ ಅಧಿಕಾರಿ ಭೇಟಿ, ಪರಿಶೀಲನೆ

# ಎಚ್‌ಪಿವಿ ಲಸಿಕೆ ಪಡೆದರೆ ಭವಿಷ್ಯದಲ್ಲಿ ಆರೋಗ್ಯಕ್ಕೆ ಭದ್ರತೆ: ಡಾ.ನಂದಿತಾ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಮಹಿಳೆಯರನ್ನು ಕಾಡುವ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವಲ್ಲಿ ಎಚ್‌ಪಿವಿ ಲಸಿಕೆ ಅತ್ಯಂತ ಪರಿಣಾಮಕಾರಿಯಾಗಿದೆ. ಅರ್ಹ ವಯಸ್ಸಿಗೆ ಲಸಿಕೆ ಪಡೆದರೆ ಭವಿಷ್ಯದ ಆರೋಗ್ಯಕ್ಕೆ ಭದ್ರತೆ ಸಿಗುತ್ತದೆ ಎಂದು ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳಾದ ಡಾ.ನಂದಿತಾ ಎಮ್.ಎನ್. ಅವರು ಹೇಳಿದರು. ಇತ್ತೀಚೆಗೆ ಜಿಲ್ಲೆಯ ದೇವದುರ್ಗ ತಾಲೂಕಿನ ಕ-ರಿಗುಡ್ಡ ಸೇರಿದಂತೆ ಗ್ರಾಮೀಣ ಭಾಗದ ವಿವಿಧ ಹಳ್ಳಿಗಳಿಗೆ ಭೇಟಿ ಹೆಚ್‌ಪಿವಿ ಲಸಿಕೆ ಕಾರ್ಯವನ್ನು ಪರಿಶೀಲಿಸಿ, ಅವರು ಮಾತನಾಡಿದರು.**




ಈ ಲಸಿಕೆ ಹೊಸದೇನಲ್ಲ, ಜಗತ್ತಿನಾದ್ಯಂತ ಈಗಾಗಲೇ 50 ಕೋಟಿಗೂ ಅಧಿಕ ಲಸಿಕೆಗಳನ್ನು ನೀಡಲಾಗಿದೆ. ಕಳೆದ 15 ವರ್ಷಗಳ ಅಂಕಿ-ಅಂಶಗಳು ಈ ಲಸಿಕೆ ಸುರಕ್ಷಿತ ಮತ್ತು ಪರಿಣಾಮಕಾರಿ ಎಂಬುದನ್ನು ಸಾಬೀತುಪಡಿಸಿವೆ ಎಂದರು. ಸರ್ಕಾರದ ಮಾರ್ಗಸೂಚಿಯಂತೆ 14 ವರ್ಷ ಪೂರೈಸಿದ ಮತ್ತು 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಉಚಿತವಾಗಿ ಲಸಿಕೆ ನೀಡಲಾಗುತ್ತಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. 14 ವರ್ಷದ ಹೆಣ್ಣು ಮಕ್ಕಳಿಗೆ ಹೆಚ್.ಪಿ.ವಿ ಲಸಿಕೆಯನ್ನು ಪಾಲಕರು ಯಾವುದೇ ತಪ್ಪು ನಂಬಿಕೆಗಳು, ಸಾಮಾಜಿಕ ಜಾಲತಾಣಗಳಲ್ಲಿ ವೈಜ್ಞಾನಿಕವಾಗಿ ಗೊತ್ತಿಲ್ಲದೆ ಕೆಲವರು ಹರಡುವ ಸುಳ್ಳು ಸುದ್ದಿಗಳನ್ನು ನಂಬದೆ, ಯಾವುದೇ ಹಿಂದೇಟು ಹಾಕದೆ ಭವಿಷ್ಯದಲ್ಲಿ ಹೆಣ್ಣು ಮಕ್ಕಳನ್ನು ಗರ್ಭಕಂಠದ ಕ್ಯಾನ್ಸರ್‌ನಿಂದ ದೂರವಿರಿಸಲು ಎಲ್ಲ ಪಾಲಕರು ಮುಂದೆ ಬರಬೇಕು ಎಂದರು.

ಹೆಣ್ಣು ಮಕ್ಕಳ ಜೀವನದಲ್ಲಿ ಗಂಭೀರ ಆರೋಗ್ಯ ಸಮಸ್ಯೆಯನ್ನುಂಟು ಮಾಡುವ ಗರ್ಭಕಂಠದ ಕ್ಯಾನ್ಸರ್ ತಡೆಗೆ ಹೆಚ್‌ಪಿವಿ ಲಸಿಕೆ ಅತ್ಯಂತ ಉಪಯುಕ್ತವಾಗಿದ್ದು, ಈಗಾಗಲೆ ಲಸಿಕೆಯನ್ನು ಹಾಕಲಾಗುತ್ತಿದ್ದು, ದಯವಿಟ್ಟು ಅನಗತ್ಯ ತಪ್ಪು ಮಾಹಿತಿಗಳಿಗೆ ಕಿವಿಗೊಡದೆ, 14 ವರ್ಷದ ಹೆಣ್ಣು ಮಕ್ಕಳಿಗೆ ಉಚಿತ ಹೆಚ್.ಪಿ.ವಿ (ಹೂಮನ್ ಪ್ಯಾಪಿಲೋಮ ವೈರಸ್) ವಿರುದ್ಧದ ಲಸಿಕೆ ಹಾಕಿಸಬೇಕೆಂದರು.

ಗರ್ಭಕಂಡದ ಕ್ಯಾನ್ಸರ್‌ಗೆ ಕಾರಣಗಳು: ಸಾಮಾನ್ಯವಾಗಿ ವೈಯಕ್ತಿಕ ಶುಚಿತ್ವ, ಜನನಾಂಗಗಳಲ್ಲಿ ತೊಂದರೆ, ಹುಣ್ಣು, ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಗರ್ಭಕಂಡದಹೂಮನ್ ಪ್ಯಾಪಿಲೋಮ ವೈರಸ್ (ಹೆಚ್.ಪಿ.ವಿ) ಸೋಂಕು ಕ್ರಮೇಣ ಗರ್ಭಕಂಠದ ಜೀವಕೋಶಗಳಲ್ಲಿ ಬದಲಾವಣೆಗಳಾಗಿ ಕ್ಯಾನ್ಸರ್ ಆಗಿ ಬದಲಾಗುತ್ತದೆ.

ಈ ಹಿನ್ನಲೆಯಲ್ಲಿ ಮಾರಕವಾಗುವುದನ್ನು ತಡೆಯಲು ಹೆಚ್.ಪಿ.ವಿ ಲಸಿಕೆಯು ಸೂಕ್ತವಾಗಿದೆ ಎಂದು ಜಿಲ್ಲಾ ಆರ್.ಸಿ.ಹೆಚ್. ಅಧಿಕಾ-ರಿಗಳು ಸಾರ್ವಜನಿಕರಿಗೆ ಮಾಹಿತಿ ನೀಡಿದರು. ದೇವದುರ್ಗ ತಾಲೂಕು ಆರೋಗ್ಯಾಧಿಕಾರಿ ಡಾ.ಬನದೇಶ ಅವರು ಮಾತನಾಡಿ, ಪೋಷಕರು ತಮ್ಮ ಮಕ್ಕಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರವಾಗಲಿ ಅಥವಾ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಲಸಿಕೆ ಹಾಕಿಸುವಂತೆ ಮನವಿ ಮಾಡಿದರು. ಈ ವೇಳೆ ಲಸಿಕೆ ಹಾಕಿಸಲು ನಿರಾಕ-ರಿಸಿದ್ದ ಕುಟುಂಬಗಳ ಮನೆಗೆ ಅಧಿಕಾ-ರಿಗಳು ಭೇಟಿ ನೀಡಿ ಜಾಗೃತಿ ಮೂಡಿಸಿದರು. ಭೇಟಿ ವೇಳೆ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಿ.ಜಾನಕಿ, ಹಿರಿಯ ಆರೋಗ್ಯ ಸುರಕ್ಷತಾ ಅಧಿಕಾರಿ ಶಾಂತಮ್ಮ, ಸಮುದಾಯ ಆರೋಗ್ಯ ಅಧಿಕಾರಿ ಪುನೀತ್, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ ಈರಮ್ಮ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಮ್ಮ, ಸಿಬ್ಬಂದಿಯವರಾದ ಶಾರೋನ, ನರಸಮ್ಮ, ಮನೋಜ್ ಸೇರಿದಂತೆ ಪಿ.ಹೆಚ್.ಸಿ.ಓ, ಆಶಾ ಕಾರ್ಯಕರ್ತೆಯರು ಹಾಗೂ ತಾಯಂದಿರ ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬಿ.ಟೆಕ್ ಐಟಿ

ಬಿ.ಟೆಕ್ ಐಟಿ 4 ವರ್ಷಗಳ ಯುಜಿ ಎಂಜಿನಿಯರಿಂಗ್ ಕೋರ್ಸ್ ಆಗಿದೆ. ಇದು ಮಾಹಿತಿ ತಂತ್ರಜ್ಞಾನದಲ್ಲಿ ಬಿ.ಟೆಕ್ ವಿಶೇಷತೆಯಾಗಿದ್ದು, ಇದು ಎಲೆಕ್ಟ್ರಾನಿಕ್ ಮಾಹಿತಿಯನ್ನು ಸುರಕ್ಷಿತವಾಗಿ ವಿನಿಮಯ ಮಾಡಿಕೊಳ್ಳಲು ಕಂಪ್ಯೂಟರ್ ವ್ಯವಸ್ಥೆಗಳು, ನೆಟ್‌ವರ್ಕ್‌ಗಳು ಮತ್ತು ಸಂಗ್ರಹಣೆಯ ಮೇಲೆ ಕೇಂದ್ರೀಕರಿಸುತ್ತದೆ. ಐಟಿ ಎಂಜಿನಿಯರ್, ಐಟಿ ತಜ್ಞರು, ಮೊಬೈಲ್ ಅಪ್ಲಿಕೇಶನ್ ಡೆವಲಪರ್, ಕಂಪ್ಯೂಟರ್ ಪ್ರೋಗ್ರಾಮರ್, ನೆಟ್‌ವರ್ಕಿಂಗ್ ಸಿಸ್ಟಮ್ಸ್ ನಿರ್ವಾಹಕ, ಡೇಟಾಬೇಸ್ ನಿರ್ವಾಹಕ, ವೆಬ್ ಡೆವಲಪರ್, ಸೈಬರ್ ಸೆಕ್ಯುರಿಟಿ ವಿಶ್ಲೇಷಕ, ಇತ್ಯಾದಿ ಪಾತ್ರಗಳಲ್ಲಿ ಕೆಲಸ ಮಾಡಲು ಎದುರು ನೋಡಬಹುದು. ಬಿಟೆಕ್ ಐಟಿ ಕೋರ್ಸ್ ವಿವರಗಳು: ಮುಖ್ಯಾಂಶಗಳು ಮಾಹಿತಿ ತಂತ್ರಜ್ಞಾನದಲ್ಲಿ ಬಿಟೆಕ್ ಉದ್ಯೋಗ ಮಾರುಕಟ್ಟೆಯಲ್ಲಿ ಹೆಚ್ಚು ಮೌಲ್ಯಯುತವಾದ ಪದವಿ ಕೋರ್ಸ್ ಆಗಿದ್ದು, ವಿಜ್ಞಾನ ವಿದ್ಯಾರ್ಥಿಗಳು ತಮ್ಮ 12 ನೇ ತರಗತಿಯನ್ನು ಪೂರ್ಣಗೊಳಿಸಿದ ನಂತರ ಅವರಿಗೆ ಲಭ್ಯವಿದೆ. ಮಾಹಿತಿ ತಂತ್ರಜ್ಞಾನವು ವ್ಯವಹಾರದ ದಿನನಿತ್ಯದ ಕಾರ್ಯಾಚರಣೆಗಳಿಗೆ ಅತ್ಯಗತ್ಯ ಮತ್ತು ಒಬ್ಬರ ವ್ಯವಹಾರವನ್ನು ಸ್ಕೇಲಿಂಗ್ ಮಾಡಲು ಮತ್ತು ಹೆಚ್ಚಿನ ಹಣವನ್ನು ಗಳಿಸಲು ಬಂದಾಗ ಇನ್ನೂ ಹೆಚ್ಚು ಮುಖ್ಯವಾಗಿದೆ. ಆದ್ದರಿಂದ, ಬಿಟೆಕ್ ಐಟಿ ಪದವಿ ಇಂದಿನ ಜಗತ್ತಿನಲ್ಲಿ ನಂಬಲಾಗದಷ್ಟು ಮೌಲ್ಯಯುತವಾಗಿದೆ. ಬಿ ಟೆಕ್ ಇನ್ ಐಟಿ ಕೋರ್ಸ್ ವಿವರಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು, ವಿದ್ಯಾರ್ಥಿಗಳು ಕೆಳಗೆ ನೀಡಲಾದ ಕೋಷ್ಟಕವನ್ನು ಪರಿಶೀಲಿಸಬಹುದು: ವಿಶೇಷಗಳು ವಿವರಗಳು ಮಟ್ಟ ಪದವಿಪೂರ್ವ ಅವಧಿ 4 ವರ್ಷಗಳು ಅರ್ಹತೆ ವಿದ್ಯಾರ್ಥಿಗಳು ವಿಜ್ಞಾನ ವಿಭಾಗದಲ್ಲಿ (ಕಅಬ) 12 ನೇ ತರಗತಿಯನ್ನು ಕನಿಷ್ಠ 50 ರಿಂದ 60% ಒಟ್ಟು ಅಂಕಗಳೊಂದಿಗೆ ಪೂರ್ಣಗೊಳಿಸಿರಬೇಕು. ಪ್ರವೇಶ ಮೆರಿಟ್/ಪ್ರವೇಶ ಆಧಾರಿತ, ಪ್ರವೇಶ ಪರೀಕ್ಷೆಗಳು ಜೆಇಇ ಮುಖ್ಯ, ಜೆಇಇ ಅಡ್ವಾನ್ಸ್ಡ್, ಟಿಎನ್‌ಇಎ ಕೌನ್ಸೆಲಿಂಗ್, ಕೆಸಿಇಟಿ, ಎಂಎಚ್‌ಟಿ ಸಿಇಟಿ, ಕಾಮೆಡ್‌ಕೆ ಯುಜಿಇಟಿ, ಟಿಎಸ್ ಇಎಎಂಸಿಇಟಿ, ಗುಜೆಸಿಇಟಿ, ಎಸ್‌ಆರ್‌ಎಂಜೆಇಇ, ಇತ್ಯಾದಿ.

## ಕನ್ನಡ ಪುಸ್ತಕ ಸೊಗಸು ಬಹುಮಾನಕ್ಕೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ 2025ರ ಕ್ಯಾಲೆಂಡರ್ ವರ್ಷದ ಜನವರಿಯಿಂದ ಡಿಸೆಂಬರ್ ವರೆಗೂ ಕನ್ನಡದಲ್ಲಿ ಪ್ರಕಟವಾದ ಕೃತಿಗಳಿಗೆ, ಅವುಗಳ ಮುದ್ರಣ, ಮುಖಪುಟ ವಿನ್ಯಾಸ, ಗುಣಮಟ್ಟವನ್ನು ಪರಿಗಣಿಸಿ ವಿವಿಧ ಕನ್ನಡ ಪುಸ್ತಕ ಸೊಗಸು ಬಹುಮಾನಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.**

ಆಸಕ್ತಪ್ರಕಾಶಕರು, ಮುದ್ರಕರು, ಕಲಾವಿದರು ಅರ್ಜಿಸಲ್ಲಿಸಬಹುದಾಗಿದೆ. ಪುಸ್ತಕದ ಹೆಸರು, ಲೇಖಕರ ಹೆಸರು, ಪ್ರಕಟವಾದ ವರ್ಷ, ಪ್ರಕಾಶಕರ ಹೆಸರು, ಮುದ್ರಣಾಲಯದ ಹೆಸರು, ಮುಖಪುಟ ಚಿತ್ರರಚನೆಯ ಕಲಾವಿದರ ಹೆಸರು / ಚಿತ್ರಕಲಾವಿದರ ಪೂರ್ಣ ವಿಳಾಸ / ದೂರವಾಣಿ ಸಂಖ್ಯೆ? ಈ ಎಲ್ಲಾ ವಿವರಗಳೊಂದಿಗೆ ಪುಸ್ತಕದ ಎರಡು ಪ್ರತಿಗಳನ್ನು ಅರ್ಜಿ ನಮೂನೆಯೊಂದಿಗೆ ಮೇ.11ರೊಳಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560 002 ? ಈ ವಿಳಾಸಕ್ಕೆ ಕಳುಹಿಸಿ ಕೊಡಬಹುದಾಗಿದೆ. ಸಲ್ಲಿಸಲಾಗುವ ಪುಸ್ತಕಗಳನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಕೊನೆಯ ದಿನಾಂಕ ಮುಗಿದ ನಂತರ ಬಂದ ಪುಸ್ತಕಗಳನ್ನು ಬಹುಮಾನಕ್ಕೆ ಪರಿಗಣಿಸಲಾಗುವುದಿಲ್ಲ. ಅರ್ಜಿ ನಮೂನೆಯನ್ನು ವೆಬ್‌ಸೈಟ್ ವಿಳಾಸ: https://kpp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಮೊದಲನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು -560002 ಇಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಆಡಳಿತಾಧಿಕಾರಿಗಳಾದ ಕೆ.ಬಿ.ಕಿರಣ್ ಸಿಂಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಬಸವ ಜಯಂತಿ ಅದ್ದೂರಿ ಆಚರಣೆಗೆ ನಿರ್ಧಾರ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಕರ್ನಾಟಕ ಸಂಸ್ಕೃತಿಕ ನಾಯಕ ಬಸವಣ್ಣನವರ ಜಯಂತಿಯನ್ನು ತಾಲೂಕ ಆಡಳಿತದ ವತಿಯಿಂದ ಏಪ್ರಿಲ್ 20 ರಂದು ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಇದಕ್ಕೆ ಎಲ್ಲರೂ ಸಹಕರಿಸಿ ಎಂದು ತಹಶೀಲ್ದಾರ್ ಡಾ.ವಿನಯಾ ಹೂಗಾರ ಹೇಳಿದರು.**

ಬುಧವಾರ ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ತಾಲೂಕ ಆಡಳಿತ ವತಿಯಿಂದ ಆಯೋಜಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. 12ನೇ ಶತಮಾನದಲ್ಲಿ ಸಮಾನತೆಯ ಕ್ರಾಂತಿಯನ್ನು ತಂದ ವಿಶ್ವಗುರು ಅಣ್ಣ ಬಸವಣ್ಣನವರ ಜಯಂತಿಯನ್ನು ಅತ್ಯಂತ ಸಂಭ್ರಮ ಹಾಗೂ ವಿಜೃಂಭಣೆಯಿಂದ ಆಚರಿಸಲಾಗುವುದು. ಏಪ್ರಿಲ್ 20 ರಂದು ಮುಂಜಾನೆ 8:30 ಘಂಟೆಗೆ ರಾಜವಾಡೆಯಿಂದ ಶ್ರೀ ಬಸವೇಶ್ವರರ ಭಾವಚಿತ್ರದ ಭವ್ಯ ಮೆರವಣಿಗೆ ಆರಂಭಿಸಲಾಗುವುದು.

ಮೆರವಣಿಗೆ ಸಕಲ ವಾದ್ಯ



ಮೇಳಗಳೊಂದಿಗೆ ಪಟ್ಟಣದ ಕತ್ರಿ ಬಜಾರ್, ಶಿವಾಜಿ ಸರ್ಕಲ್, ಮಹಾರಾಣಾ ಪ್ರತಾಪ್ ಸಿಂಹ ಸರ್ಕಲ್ ದಿಂದ ಬಸ್ ನಿಲ್ದಾಣದ ಮಾರ್ಗವಾಗಿ ಶ್ರೀ ಬಸವೇಶ್ವರ ವೃತ್ತಕ್ಕೆ ತಲುಪುವುದು. ನಂತರ ಅಲ್ಲಿಯೇ ವೇದಿಕೆ ಕಾರ್ಯಕ್ರಮ ಜರಗುವುದು. ಜಯಂತಿಯನ್ನು ಸರ್ಕಾರದ ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸಿ ಗಣ್ಯರನ್ನು ಆಹ್ವಾನಿಸಲಾಗುವುದು. ಪಟ್ಟಣದ ಪ್ರಮುಖ ವೃತ್ತಗಳನ್ನು ಅಲಂಕರಿಸಲಾಗುವುದು ಅಣ್ಣ ಬಸವಣ್ಣನವರ ತತ್ವಾದರ್ಶಗಳನ್ನು ಇಂದಿನ ಯುವ ಪೀಳಿಗೆಗೆ ತಿಳಿಸಲು ಉಪನ್ಯಾಸ ಆಯೋಜಿಸಲಾಗುವುದು. ಎಲ್ಲ ಕಾರ್ಯಕ್ರಮಗಳು ಶಾಂತಿಯುತವಾಗಿ ನಡೆಯುವಂತಾಗಲು ಪೊಲೀಸ್ ಇಲಾಖೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಶ್ರೀ ಬಸವೇಶ್ವರ ಉತ್ಸವ ಸಮಿತಿ ಅಧ್ಯಕ್ಷ ಮಹಾಂತೇಶ ಮುರಾಳ ಮಾತನಾಡಿ ಸಮಾನತೆಯ ಹರಿಕಾರರಾದ ವಿಶ್ವಗುರು ಬಸವಣ್ಣನವರ 893ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ತಾಲೂಕ ಆಡಳಿತ ತೆಗೆದುಕೊಳ್ಳುವ ಎಲ್ಲ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಸಮಾಜ ಬಾಂಧವರು ಸಂಪೂರ್ಣ ಸಹಕಾರ ನೀಡಲಿದ್ದಾರೆ ಕಾರ್ಯಕ್ರಮದಲ್ಲಿ ಯಾವುದೇ ರೀತಿಯ ಲೋಪ ಆಗದಂತೆ ನೋಡಿಕೊಳ್ಳಬೇಕು. ಮೆರವಣಿಗೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರನ್ನು ಸೇರಿಸಲು ಪ್ರಯತ್ನಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಗಣ್ಯರಾದ ಕಾಶಿನಾಥ ಮುರಾಳ, ಎಂ.ಎಸ್.ಸರಶಟ್ಟಿ,ಜಿ.ಜಿ. ಶರಣಗೌಡ ಪಾಟೀಲ,ಗಂಗಾಧರ ಕಸ್ತೂರಿ, ತಿಪ್ಪಣ್ಣ ಸಜ್ಜನ, ಪರಶುರಾಮ ತಂಗಡಗಿ, ರಾಜು ಸಜ್ಜನ, ಅಶೋಕ ಚಿನಗುಡಿ, ಎಂ.ಎಸ್. ನಾಗರಾಳ, ನಿಂಗಣ್ಣ ಕುಂಟೋಜಿ, ರವಿ ಚಂದುಕರ, ದತ್ತು ಉಬಾಳೆ,- ಎಸ್.ಎಂ.ಪಾಲ್ಕಿ, ಲಂಕೇಶ ಪಾಟೀಲ, ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ, ಪಿಎಸ್‌ಐ ಎಸ್.ಎಂ.ಪಡಶೆಟ್ಟಿ, ತಾಪಂ ಸಹಾಯಕ ನಿರ್ದೇಶಕಿ ಸುಜಾತ ಯಡ್ರಾಮಿ, ಪುರಸಭೆ ಕಂದಾಯ ನಿರೀಕ್ಷಕ ಸುರೇಶ ಅಮರಣ್ಣವರ ಹಾಗೂ ವಿವಿಧ ಇಲಾಖೆಗಳ ತಾಲೂಕ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಡಿಲಿಮಿಟೇಷನ್, ಮಹಿಳಾ ಮೀಸಲಾತಿಗಳನ್ನು ತಿರಸ್ಕರಿಸಬೇಕು; ಜೈರಾಮ್

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಮಹಿಳಾ ಮೀಸಲಾತಿ ಕಾನೂನನ್ನು ಜಾರಿಗೆ ತರುವ ನೆಪದಲ್ಲಿ ಕೇಂದ್ರ ಸರ್ಕಾರ ತಂದಿರುವ ಮಸೂದೆಗಳ ನಿಜವಾದ ಉದ್ದೇಶ ದುರುದ್ದೇಶಪೂರಿತವಾಗಿದೆ ಮತ್ತು ಅವುಗಳನ್ನು ಪ್ರಸ್ತುತ ರೂಪದಲ್ಲಿ ಸಂಪೂರ್ಣವಾಗಿ ತಿರಸ್ಕರಿಸಬೇಕಾಗಿದೆ ಎಂದು ಕಾಂಗ್ರೆಸ್ ಹೇಳಿದೆ.**

ಕಾಂಗ್ರೆಸ್ ಸಂವಹನ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಮೂರು ಮಸೂದೆಗಳನ್ನು ಲೋಕಸಭೆಯಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ ಮತ್ತು ಪ್ಯಾಕೇಜಿಂಗ್ ಮತ್ತು ಮಾರ್ಕೆಟಿಂಗ್ ಮಹಿಳಾ ಮೀಸಲಾತಿಯಾಗಿದೆ ಆದರೆ ಮೂಲಭೂತ ಅಂಶಗಳು ಡಿಲಿಮಿಟೇಶನ್‌ಗೆ ಸಂಬಂಧಿಸಿವೆ ಎಂದು ಅವರು ಹೇಳಿದರು. ಬಿಜೆಪಿ ಈಗ ಪ್ರಬಲವಾಗಿರುವ ಕೆಲವು ಜನನಿಬಿಡ ರಾಜ್ಯಗಳಿಗೆ ಸವಲತ್ತು ನೀಡುವ ಡಿಲಿಮಿಟೇಶನ್ ಪ್ರಸ್ತಾಪಗಳ ಬಗ್ಗೆ ದೇಶಾದ್ಯಂತ ಅನೇಕ ಕಳವಳಗಳು ವ್ಯಕ್ತವಾಗಿವೆ.



ಲೋಕಸಭೆಯಲ್ಲಿ ಹಲವಾರು ರಾಜ್ಯಗಳ ಸಾಪೇಕ್ಷ ಬಲವು ವಾಸ್ತವವಾಗಿ ಕುಸಿಯುತ್ತದೆ ಎಂದು ರಮೇಶ್ ಎಕ್?ಸ ಮಾಡಿದ್ದಾರೆ.

ಅಸ್ಸಾಂ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಡಿಲಿಮಿಟೇಶನ್ ಅನ್ನು ವಾಸ್ತವವಾಗಿ ಮಾಡಿದ ವಿಧಾನವು ಮೋದಿ-ಶಾ ಜೋಡಿ ಎಷ್ಟು ಪೈಶಾಚಿಕವಾಗಿ ಕೆಲಸ ಮಾಡುತ್ತದೆ ಎಂದು ತೋರಿಸುತ್ತದೆ ಎಂದು ಅವರು ಹೇಳಿದರು.ಈ ಮಸೂದೆಗಳ ನಿಜವಾದ ಉದ್ದೇಶ ದುರುದ್ದೇಶಪೂರಿತವಾಗಿದೆ, ಅವುಗಳ ವಿಷಯವು ಮೋಸದಾಯಕವಾಗಿದೆ ಮತ್ತು ಅವುಗಳ ಹಾನಿ ಅಗಾಧವಾಗಿದೆ. ಅವುಗಳನ್ನು ಅವುಗಳ ಪ್ರಸ್ತುತ ರೂಪದಲ್ಲಿ ಸಂಪೂರ್ಣವಾಗಿ ತಿರಸ್ಕರಿಸಬೇಕಾಗಿದೆ ಎಂದು ರಮೇಶ್ ಪ್ರತಿಪಾದಿಸಿದರು.

ವಿರೋಧ ಪಕ್ಷದ ಬೇಡಿಕೆ ಸರಳವಾಗಿದೆ: ಲೋಕಸಭೆಯ ಪ್ರಸ್ತುತ 543 ಸದಸ್ಯರ ಬಲದ ಮೂರನೇ ಒಂದು ಭಾಗವನ್ನು ಮಹಿಳೆಯರಿಗೆ ಮೀಸಲಿಡಬೇಕು ಮತ್ತು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಿಗೆ ಸೇರಿದ ಮಹಿಳೆಯರಿಗೆ ಮೀಸಲಾತಿ ನೀಡಬೇಕು ಎಂದು ಅವರು ಹೇಳಿದರು.2023 ರಲ್ಲಿ ಇದು ವಿರೋಧ ಪಕ್ಷದ ನಿಲುವಾಗಿತ್ತು ಮತ್ತು ಇಂದಿಗೂ ಇದೇ ನಿಲುವು ಮುಂದುವರೆದಿದೆ ಎಂದು ಅವರು ಹೇಳಿದರು. ಇದು ನಿಜವಾದ ಅಧಿಕಾರ ಹಂಚಿಕೆ ಮತ್ತು ಹೆಚ್ಚು ಪ್ರಜಾಪ್ರಭುತ್ವ ಮತ್ತು ಸಾಂವಿಧಾನಿಕ ಮೌಲ್ಯಗಳು ಮತ್ತು ತತ್ವಗಳಿಗೆ ಅನುಗುಣವಾಗಿದೆ ಎಂದು ರಮೇಶ್ ಹೇಳಿದರು.2029 ರ ವೇಳೆಗೆ ಮಹಿಳಾ ಕೋಟಾ ಕಾನೂನನ್ನು ಜಾರಿಗೆ ತರಲು ಮತ್ತು ಸದನದ ಬಲವನ್ನು 850 ಕ್ಕೆ ಹೆಚ್ಚಿಸಲು ಸರ್ಕಾರ ಗುರುವಾರ ಲೋಕಸಭೆಯಲ್ಲಿ ಮಂಡಿಸಲು ಮೂರು ಮಸೂದೆಗಳನ್ನು ಪಟ್ಟಿ ಮಾಡಿರುವಾಗ ಅವರ ಹೇಳಿಕೆಗಳು ಬಂದವು.

# ಅಮೆರಿಕ ರಾಷ್ಟ್ರೀಯ ಭದ್ರತಾ ಸಲಹೆಗಾರರೊಂದಿಗೆ ವಿನಯ್ ಮೋಹನ್ ಕ್ವಾತ್ರಾ ಮಾತುಕತೆ



ನೈಜ್ಯ ದೆಸೆ ನ್ಯೂಸ್

**ವಾಷಿಂಗ್ಟನ್: ಅಮೆರಿಕದಲ್ಲಿರುವ ಭಾರತೀಯ ರಾಯಭಾರಿ ವಿನಯ್ ಮೋಹನ್ ಕ್ವಾತ್ರಾ ಅವರು ಅಲ್ಲಿನ ವ್ಯಾಪಾರ ಪ್ರತಿನಿಧಿ ಜೇಮಿಸನ್ ಗ್ರೀರ್ ಮತ್ತು ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ರಾಬರ್ಟ್ ಒ ಬ್ರೇನ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.**

ಭಾರತ ಮತ್ತು ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ (ಬಿಟಿಎ) ಸೂಕ್ಷ್ಮ ಅಂಶಗಳ ಕುರಿತು ಮಾತುಕತೆ ನಡೆಸುತ್ತಿರುವಾಗ ಈ ಸಭೆ ನಡೆದಿದೆ.ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಕುರಿತು ಚರ್ಚೆ ನಡೆಸಲು ಭಾರತೀಯ ಅಧಿಕಾರಿಗಳ ನಿಯೋಗ ಅಮೆರಿಕಕ್ಕೆ ಭೇಟಿ ನೀಡುವ ನಿರೀಕ್ಷೆಯಿದೆ. ಇಂದು ಇಂಡಿಯಾ ಹೌಸ್‌ನಲ್ಲಿ ಆಂಬ್. ಜೇಮಿಸನ್ ಗ್ರೀರ್ ಮತ್ತು ಆಂಬ್. ರಾಬರ್ಟ್ ಒ ಬ್ರೇನ್ ಅವರನ್ನು ಆತಿಥ್ಯ ವಹಿಸಲು ಗೌರವ ಎಂದು ಕ್ವಾತ್ರಾ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.ಫೆಬ್ರವರಿಯಲ್ಲಿ, ಭಾರತ ಮತ್ತು ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಹಂತಕ್ಕೆ ಚೌಕಟ್ಟನ್ನು ಅಂತಿಮಗೊಳಿಸುವುದಾಗಿ ಘೋಷಿಸಿದವು.

ಆ ಚೌಕಟ್ಟಿನ ಪ್ರಕಾರ, ಭಾರತದ ಮೇಲಿನ ಸುಂಕವನ್ನು ಶೇ.18 ಕ್ಕೆ ಇಳಿಸಲು ಅಮೆರಿಕ ಒಪ್ಪಿಕೊಂಡಿತ್ತು.ನಾವು ವಿವಿಧ ದ್ವಿಪಕ್ಷೀಯ ಸಹಕಾರ ಅವಕಾಶಗಳ ಕುರಿತು ಉತ್ಪಾದಕ ಸಂಭಾಷಣೆ ನಡೆಸಿದ್ದೇವೆ. ಪ್ರಪಂಚದಾದ್ಯಂತದ ಪ್ರಮುಖ ಬೆಳವಣಿಗೆಗಳನ್ನು ಸಹ ಚರ್ಚಿಸಲಾಗಿದೆ. ಬಲವಾದ ಭಾರತ-ಯುಎಸ್ ಸಂಬಂಧಗಳಿಗೆ ಅವರ ಬಲವಾದ ಮತ್ತು ನಿರಂತರ ಬೆಂಬಲವನ್ನು ಶ್ಲಾಘಿಸುತ್ತೇವೆ ಎಂದು ಕ್ವಾತ್ರಾ ಹೇಳಿದರು. ಕಳೆದ ವಾರ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ಅವರು ವಾಷಿಂಗ್ಟನ್‌ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ದ್ವಿಪಕ್ಷೀಯ ವ್ಯಾಪಾರವು ಚರ್ಚೆಯ ಭಾಗವಾಗಿತ್ತು.ಫೆಬ್ರವರಿ 20 ರಂದು, ಯುಎಸ್ ಸುಪ್ರೀಂ ಕೋರ್ಟ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅಂತರರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆ (ಐಇಪಿಪಿಎ) ಅಡಿಯಲ್ಲಿ ವಿಧಿಸಲಾದ ಸುಂಕ ನೀತಿಗಳು ಸಂವಿಧಾನಬಾಹಿರ ಎಂದು ತೀರ್ಪು ನೀಡಿತು.

ಭಾರತ ಮತ್ತು ಯುಎಸ್ ಆರಂಭದಲ್ಲಿ ಮಾರ್ಚ್‌ನಲ್ಲಿ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲು ಯೋಜಿಸುತ್ತಿದ್ದವು, ಆದರೆ ಯುಎಸ್ ಸುಪ್ರೀಂಕೋರ್ಟ್ ತೀರ್ಪಿನ ನಂತರ ಸುಂಕ ಹೇರುವ ವ್ಯವಸ್ಥೆಯಲ್ಲಿ ಬದಲಾವಣೆಗಳಾಗಿವೆ. ಅಮೆರಿಕದ ಹೊಸ ಜಾಗತಿಕ ಸುಂಕ ವಾಸ್ತುಶಿಲ್ಪ ಜಾರಿಗೆ ಬಂದ ನಂತರ ಒಪ್ಪಂದಕ್ಕೆ ಸಹಿ ಹಾಕಲಾಗುವುದು ಎಂದು ಅಧಿಕೃತ ಮೂಲಗಳು ಈ ಹಿಂದೆ ಹೇಳಿದ್ದವು. ಚೀನಾ ಮತ್ತು ಭಾರತ ಸೇರಿದಂತೆ ಕೆಲವು ದೇಶಗಳು ಕೆಲವು ಉತ್ಪಾದನಾ ವಲಯಗಳಲ್ಲಿ ಬಲವಂತದ ಕಾರ್ಮಿಕರನ್ನು ಬಳಸಿಕೊಂಡು ಉತ್ಪಾದಿಸುವ ಸರಕುಗಳ ಆಮದು ಮತ್ತು ಹೆಚ್ಚಿನ ಸಾಮರ್ಥ್ಯದ ಉತ್ಪಾದನೆಯ ಮೇಲಿನ ನಿಷೇಧವನ್ನು ಜಾರಿಗೊಳಿಸುವಲ್ಲಿ ವಿಫಲವಾದ ಬಗ್ಗೆ ವ್ಯವಹರಿಸುವ ಸೆಕ್ಷನ್ 301 ರ ಅಡಿಯಲ್ಲಿ ಯುಎಸ್ ಟ್ರೇಡ್ ಪ್ರತಿನಿಧಿಯು ಪ್ರಾರಂಭಿಸಿದ ಎರಡು ತನಿಖೆಗಳ ಮೋಡದ ಅಡಿಯಲ್ಲಿ ವ್ಯಾಪಾರ ಮಾತುಕತೆಗಳು ಬರುತ್ತವೆ.

# ರಸಗೊಬ್ಬರ ಮತ್ತು ಕೃಷಿ ಪರಿಕರ ಮಾರಾಟಗಾರರ ಸಭೆ.

ನೈಜ್ಯ ದೆಸೆ ನ್ಯೂಸ್

**ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ತಾಲ್ಲೂಕಿನ ತಾಲ್ಲೂಕು ಪಂಚಾಯ್ತಿ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ, 2026-27 ನೇ ಸಾಲಿನ ರಸಗೊಬ್ಬರ ಪೂರೈಕೆ ಮತ್ತು ಸಮರ್ಪಕ ನಿರ್ವಹಣೆ,ಸಮತೋಲನ ಬಳಕೆ ಮತ್ತು ಪರ್ಯಾಯ ರಸಗೊಬ್ಬರಗಳ ಅರಿವು ಮೂಡಿಸುವ ಕುರಿತು ಸಭೆ ನಡೆಯಿತು.ಸಹಾಯಕ ಕೃಷಿ ನಿರ್ದೇಶಕ ಸಿ. ಮುನಿರಾಜ ರವರು ಸಭೆಯಲ್ಲಿ ಮಾತನಾಡಿದರು.**

2026-27 ನೆ ಸಾಲಿನ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರ ವಿತರಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ದಾಸ್ತಾನು ಧರ ಪಟ್ಟಿಯನ್ನು ಸಾರ್ವಜನಿಕರಿಗೆ ಕಾಣುವಂತೆ ಸೂಚನಾ ಫಲಕಗಳಲ್ಲಿ ಪ್ರದರ್ಶಿಸುವುದು. ಕಡ್ಡಾಯವಾಗಿ ಪಿ.ಓ.ಎಸ್ (POS) ಯಂತ್ರದ ಮೂಲಕವೇ ರೈತರ ಆಧಾರ್ ವಿವರಗಳನ್ನು ಪಡೆದು ವಿತರಿಸಬೇಕು. ಕಡ್ಡಾಯವಾಗಿ ರೈತರಿಗೆ ರಶೀದಿ ನೀಡಬೇಕು. ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ದಾಸ್ತಾನು ಮತ್ತು ವಿತರಣೆ ವಿವರಗಳನ್ನು ಕಚೇರಿಗೆ ಸಲ್ಲಿಸಬೇಕು.




ಡಿಎಪಿ ಮತ್ತು ಯೂರಿಯಾ ಗೊಬ್ಬರವನ್ನು ತಾಲ್ಲೂಕಿನಲ್ಲಿ ಹಂಗಾಮುವಾರು ಬೆಳೆಯುವ ಬೆಳೆಗಳ ಅಗತ್ಯಕ್ಕೆ ತಕ್ಕಂತೆ ಮಾರಾಟ ಮಾಡಬೇಕು.

ಮುಂದೆ ರಸಗೊಬ್ಬರ ಅಭಾವ ಬರುವುದೆಂದು ಭಾವಿಸಿ ರೈತರು ಮುಂಗಡವಾಗಿ ಖರೀದಿಸಿ ಶೇಖರಣೆ ಮಾಡಿಕೊಳ್ಳುವ ಸಂಭವವಿದ್ದರೆ ಮಾಹಿತಿ ನೀಡಬೇಕು.ಪ್ರಸ್ತುತ ಮುಂಗಾರು ಹಂಗಾಮ ಪ್ರಾರಂಭವಾಗಿಲ್ಲ ರಸಗೊಬ್ಬರಕ್ಕೆ ಅತಿಯಾದ ಬೇಡಿಕೆಯೂ ಇಲ್ಲ, ಮಾರಾಟಗಾರರು ಕೃತಕ ಅಭಾವ ಸೃಷ್ಟಿಸಿ ಹೆಚ್ಚಿನ ಧರಕ್ಕೆ ಮಾರಾಟ ಮಾಡಿದರೆ ರಸಗೊಬ್ಬರ ಕಾಯ್ದೆ 1985 ರ ಅನ್ವಯ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು. ಡಿಎಪಿ ಮತ್ತು ಯೂರಿಯಾ ಗೊಬ್ಬರವನ್ನು ಶಿಫಾರಸ್ಸಿಗಿಂತ ಹೆಚ್ಚಾಗಿ ಬಳಸುತ್ತಿದ್ದು ಎಲ್ಲಾ ಮಾರಾಟಗಾರರು ಬೆಳೆಗಳಿಗೆ ಶಿಫಾರಸ್ಸಿನ ಅನ್ವಯ ರಸಗೊಬ್ಬರ ವಿತರಿಸಲು ಸೂಚಿಸಿದರು.

ಕೆ-ಕಿಸಾನ್ ತಂತ್ರಾಂಶ ಬಳಕೆ ಯೂರಿಯಾ ಗೊಬ್ಬರದ ಅತಿಯಾದ ಬಳಕೆ ಮತ್ತು ಕಾಳ ಸಂತೆಯಲ್ಲಿ ಮಾರಾಟ ಮಾಡುವುದನ್ನು ತಡೆಯಲು ಕೆ-ಕಿಸಾನ್ ತಂತ್ರಾಂಶದ ಮೂಲಕ ವಿಶೇಷ ವೆಬ್‌ಸೈಟ್ ಅನ್ನು ಅಭಿವೃದ್ಧಿ ಪಡಿಸಲಾಗಿದೆ. ವಿತರಣೆ ಸಮಯದಲ್ಲಿ ರೈತರ ನೊಂದಣಿ ಸಂಖ್ಯೆ (ಎಫ್.ಐ.ಡಿ ನಂಬರ್) ಕಡ್ಡಾಯ ಮಾಡಿದ್ದು, ಪ್ರತಿ ರೈತರಿಗೆ ಅವರು ಜಮೀನಿನ ವಿಸ್ತೀರ್ಣದ ಆಧಾರದ ಮೇಲೆ ಪ್ರತಿ ಎಕರೆಗೆ ಒಂದು ಬ್ಯಾಗ್ ನಂತೆ ಅವರು ಹೊಂದಿರುವ ಜಮೀನಿನ ವಿಸ್ತೀರ್ಣಕ್ಕೆ ಅನುಸಾರ ವಿತರಿಸಲಾಗುವುದು, ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಿಕೊಂಡು ರೈತರಿಗೆ ಮುಂಚಿತವಾಗಿ ಅರಿವು ಮೂಡಿಸಲು ಸೂಚಿಸಿದರು. ಈ ಬಗ್ಗೆ ಕೃಷಿ ಇಲಾಖೆಯು ಸಹ ಹೆಚ್ಚಿನ ಪ್ರಚಾರ ಮಾಡಿ ರೈತರಿಗೆ ಅರಿವು ಮೂಡಿಸಲು ಗ್ರಾಮ ಪಂಚಾಯ್ತಿ ಹಾಗೂ ಹೋಬಳಿ ಮಟ್ಟದಲ್ಲಿ ಕಾರ್ಯಕ್ರಮ ಮಾಡಲಾಗುವುದು ಎಂದು ತಿಳಿಸಿದರು.

ಸಹಾಯಕ ಕೃಷಿ ನಿರ್ದೇಶಕ ಎಸ್.ಎಂ ಮೋಹನ್ ರವರು ಮಾತನಾಡಿ, ರಸಗೊಬ್ಬರ, ಕೀಟನಾಶಕ ಔಷದಿ ಹಾಗೂ ಬಿತ್ತನೆಬೀಜ ಮಾರಾಟ ಮಾಡುವ ಸಂದರ್ಭದಲ್ಲಿ ಕಾಯ್ದೆಗಳನ್ವಯ ನಿಗದಿತ ದಾಸ್ತಾನು ವಹಿ, ರಶೀದಿ ವಹಿ ಹಾಗೂ ಇತರೆ ದಾಖಲೆಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು. ರಸಗೊಬ್ಬರಮತ್ತು ಬಿತ್ತನೆ ಬೀಜ ಅಗತ್ಯ ವಸ್ತುಗಳ ಕಾಯ್ದೆಯಡಿ ಬರುವುದರಿಂದ ದಾಸ್ತಾನು ವಿತರಣೆ ಮತ್ತು ಶೇಖರಣೆಯಲ್ಲಿ ವಿಶೇಷ ಗಮನ ಹರಿಸಿ, ರೈತರಿಗೆ ವಿತರಿಸಲು ಸೂಚಿಸಿದರು.

ಪಿಡೆನಾಶಕಗಳ ವಿತರಣೆ ಸಂದರ್ಭದಲ್ಲಿ ಅಧಿಕೃತ ಸರಬರಾಜುದಾರರು ಅಥವಾ ವಿತರಕರಿಂದ ಪಡೆದು ಸೂಕ್ತ ದಾಖಲೆ ನಿರ್ವಹಿಸಿ ಮಾರಾಟ ಮಾಡುವುದು Bio Stimulate ಗಳನ್ನು ರಸಗೊಬ್ಬರ ಕಾಯ್ದೆಯಡಿ ಅಧಿಸೂಚಿಸಿದ್ದು ಎಲ್ಲರೂ ಅಧಿಕೃತ ಸರಬರಾಜು ಸಂಸ್ಥೆಗಳಿಂದ ಈಅಡಿಟ ``O" ಪಡೆದು ರಸಗೊಬ್ಬರ ಪರವಾನಗಿಯಲ್ಲಿ ಸೇರ್ಪಡೆ ಮಾಡಿಕೊಂಡು ವಿತರಣೆ ಮಾಡಲು ಸೂಚಿಸಿದರು. ಈ ಸಂದರ್ಭದಲ್ಲಿ ಸಹಾಯಕ ಕೃಷಿ ನಿರ್ದೇಶಕ ಮುನಿರಾಜ.ಸಿ, ಎಸ್.ಎಂ ಮೋಹನ್, ಸಹಾಯಕ ಕೃಷಿ ನಿರ್ದೇಶಕರು (ಜಾರಿಧಳ), ತಾಲ್ಲೂಕು ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷ ಮಂಜುನಾಥ್, ಕೃಷಿ ಅಧಿಕಾರಿ ರಾಮಚಂದ್ರ ಮತ್ತು ಕೃಷಿ ಇಲಾಖೆಯ ಸಿಬ್ಬಂದಿ ಮತ್ತು ತಾಲ್ಲೂಕಿನ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟ ನಾಶಕ ಮಾರಾಟಗಾರರು ಭಾಗವಹಿಸಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.